# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ

V

## Part - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-493-1-KANNADA (AT)5-VOL-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - V AT - Part I

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA V - AT - Part I

**Advisor**

| | |
|---|---|
| Shivashankara P. | Asst. Professor, GPM College, Manjeshwara |

**Chairman**

| | |
|---|---|
| Dr. Radhakrishna Bellur | Associate Professor, Govt.College, Kasaragod |

**Experts**

| | |
|---|---|
| Dr. Subrahmanya K. | Associate Professor, Govt. First Grade College, Belthangady |
| Dr. M.N Mahesha. | HOD Kannada Department, Madurai, Kamaraj University |

**Participants**

| | |
|---|---|
| Gopala Krishna Nayak. | Rtd HM, GHSS Mangalpady |
| Krishnoji Rao. | Rtd. Teacher, GVHSS Karadka |
| Dasappa K. | Rtd.HM, H.A.U.P.S Chippar |
| Sathya Prakash E K. | HM, GBLPS Bombrana |
| Gopala P.K. | UPST, GHSS Padre |
| Radhakrishna Bhat K. | UPST, SNHS Perla |
| Nayana Prasad H.T. | UPST, GHS Kadambar |
| Vinitha K K. | UPST, GHSS Chandragiri |

**Artists**

| | |
|---|---|
| Divakar. | Rtd. Drawing Teacher, GHSS Kumbla |
| Prakash. | Drawing Teacher, BRC Manjeshwara |
| Sathyanarayana Aila. | Drawing Teacher, GHSS Mangalpady |

**Academic Co-ordinator**

Dr. Sahaya Dhas D.

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ



| ಕ್ರಮಸಂಖ್ಯೆ | ಯೂನಿಟ್ | ಪುಟಗಳು |
|---|---|---|
| **ಯುನಿಟ್ 1 -** | **ಕೃಷಿ ಸಂಪದ** | **7-22** |
| | ● ಅನ್ನದಾತ (ಕವಿತೆ) | |
| | ● ಕಾಯಕ ನಿಷ್ಠೆ (ಕಥೆ) | |
| | ● ಜೇನು ಕೃಷಿ (ಲೇಖನ) | |
| **ಯುನಿಟ್ 2 -** | **ಜೀವನ ಮೌಲ್ಯ** | **23-40** |
| | ● ಸಮಯದ ಮಹತ್ವ (ಕಥೆ) | |
| | ● ನಮ್ಮ ಬಲ (ದೇಶಭಕ್ತಿ ಗೀತೆ) | |
| | ● ರಾಣಿ ಚೆನ್ನಮ್ಮ (ನಾಟಕ) | |
| **ಯುನಿಟ್ 3 -** | **ನಾವು ಮನುಜರು** | **41-55** |
| | ● ಬಿ.ಆರ್ ಅಂಬೇಡ್ಕರ್ (ವ್ಯಕ್ತಿ ಪರಿಚಯ) | |
| | ● ಆಸೆ (ಕವನ) | |
| | ● ಹಂಚಿ ತಿಂದ ಗೆಳೆಯರು (ಕಥೆ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 1. ಕೃಷಿ ಸಂಪದ





ಕೊಟ್ಟಿರುವ ಚಿತ್ರವನ್ನು ನೋಡಿ ಎರಡು ಕೃಷಿ ವಿಧಾನಗಳ ಬಗ್ಗೆ ಚರ್ಚಿಸಿರಿ. ತಿಳಿದುಕೊಂಡ ವಿಚಾರಗಳನ್ನು ತರಗತಿಯಲ್ಲಿ ಮಂಡಿಸಿರಿ.

# ಅನ್ನದಾತ

ನೇಗಿಲ ಹೂಡುತ
ಗದ್ದೆಯ ಉಳುತಲಿ
ಭತ್ತದ ಬೀಜವ ಬಿತ್ತುವನು
ಮೊಳೆತಿಹ ಸಸಿಗಳ
ಕ್ರಮದಲಿ ನೆಡುತಲಿ
ಬೆವರಿಳಿಸುತಲಿ ದುಡಿಯುವನು



ಗದ್ದೆಗೆ ಗೊಬ್ಬರ
ಹಾಕುತ ನಡುವೆ
ಬೆಳೆದಿಹ ಕಳೆಗಳ ಕೀಳುವನು
ಕೃಷಿಯನು ನಾಶವ
ಗೈಯಲು ಬರುವ
ಪ್ರಾಣಿಗೆ ಕಾವಲು ಕೂರುವನು

ಮೂಡಿದ ತೆನೆಗಳ
ಸಂತಸದಿಂದಲಿ
ಕೊಯ್ಯುತ ಮನೆಕಡೆ ಒಯ್ಯುವನು
ತೆನೆಗಳ ಬಡಿಯುತ
ಭತ್ತವ ಕುಟ್ಟುತ
ಅಕ್ಕಿಯ ಮಾಡುತ ನಲಿಯುವನು



ಅವಿರತ ಶ್ರಮದ
ಅನುಪಮ ನಿಷ್ಠೆಯ
ರೈತನೆ ನಮಗೆ ಮಾದರಿಯು
ಲೋಕಕೆ ಅನ್ನವ
ನೀಡುವ ಈತನ
ಬದುಕೇ ಒಂದು ಸಾಧನೆಯು

**- ಪ್ರಸನ್ನ ವಿ ಚೆಕ್ಕೆಮನೆ**

## ಕವಿ ಪರಿಚಯ



ಪ್ರಸನ್ನ ವಿ ಚೆಕ್ಕೆಮನೆ ಇವರು ಕಾಸರಗೋಡು ಜಿಲ್ಲೆಯ, ಬಾಡೂರು ಗ್ರಾಮದ ಧರ್ಮತ್ತಡ್ಕ ಸಮೀಪದ ಚೆಕ್ಕೆಮನೆ ಎಂಬ ಊರಿನವರು. ಸರ್ಪಂಗಳ ಹರಿಯಪ್ಪ ಭಟ್ ಹಾಗೂ ರಮಾ ಎಚ್ ಭಟ್ ದಂಪತಿಯ ಪುತ್ರಿಯಾಗಿ 05-01-1979 ರಂದು ಜನಿಸಿದರು. ಕನ್ನಡ, ಮಲಯಾಳ ಮತ್ತು ಹವ್ಯಕ ಭಾಷೆಗಳಲ್ಲಿ ಕಥೆ, ಕವನ, ಭಾವಗೀತೆ ಹಾಗೂ ಲೇಖನಗಳನ್ನು ಬರೆದಿದ್ದಾರೆ. ಇವರು ಬರೆದಿರುವ ಇನಿದನಿ (ಕವನ ಸಂಕಲನ), ಮನದ ಮಲ್ಲಿಗೆ (ಕಥಾ ಸಂಕಲನ), ಕರಿಮಣಿ ಮಾಲೆ (ಹವ್ಯಕ ಕಥಾ ಸಂಕಲನ), ಸಿಂಧೂರ ರೇಖೆಯ ಮಿಂಚು (ನೀಳ್ಗತೆಗಳ ಸಂಕಲನ), ತುಳಸಿಹಾರ (ಕನ್ನಡ ಕಾದಂಬರಿ) ಮುಂತಾದ ಕೃತಿಗಳು ಪ್ರಕಟಗೊಂಡಿವೆ. 'ಅನ್ನದಾತ' ಎಂಬ ಕವನವನ್ನು 'ಇನಿದನಿ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❐ ಹಾಡಿರಿ

- ಪದ್ಯವನ್ನು ರಾಗವಾಗಿ ಹಾಡಿರಿ.

### ❐ ಟಿಪ್ಪಣಿ ಬರೆಯಿರಿ

ಮೊಳೆತಿಹ ಸಸಿಗಳ
ಕ್ರಮದಲಿ ನೆಡುತಲಿ
ಬೆವರಿಳಿಸುತಲಿ ದುಡಿಯುವನು
........................................

'ಅನ್ನದಾತ' ಕವನದ ಮೇಲಿನ ಸಾಲು ಮತ್ತು ಕವನದ ಆಧಾರದಲ್ಲಿ ರೈತನ ದುಡಿಮೆ, ಕಾಯಕನಿಷ್ಠೆಯ ಕುರಿತು ಟಿಪ್ಪಣಿ ಬರೆಯಿರಿ.

## ❐ ಕಾರಣ ಬರೆಯಿರಿ

- ಪದ್ಯದಲ್ಲಿ ನಿಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಿ, ಇಷ್ಟವಾಗಲು ಕಾರಣವೇನು ಎಂದು ಬರೆಯಿರಿ.

## ❐ ಹುಡುಕಿ ಬರೆಯಿರಿ

ಈ ಕೆಳಗಿನ ಆಶಯವಿರುವ ಚರಣಗಳನ್ನು ಪದ್ಯಭಾಗದಿಂದ ಹುಡುಕಿ ಬರೆಯಿರಿ.

1) ರೈತನು ಬೆಳೆಯನ್ನು ರಕ್ಷಿಸುತ್ತಾನೆ.

2) ನಿರಂತರ ದುಡಿಯುವ ರೈತನ ಬದುಕು ನಮಗೆ ಆದರ್ಶಪ್ರಾಯವಾಗಿದೆ.

## ❐ ಅಭಿನಂದನ ಪತ್ರ ಬರೆಯಿರಿ

ರೈತನ ಕಾಯಕ ನಿಷ್ಠೆಯನ್ನು ಅಭಿನಂದಿಸಿ ಅವನಿಗೊಂದು ಪತ್ರ ಬರೆಯಿರಿ.

## ❒ ಹುಡುಕಿ ಬರೆಯಿರಿ

ಈ ಕೆಳಗೆ ನೀಡಲಾದ ಪಟ್ಟಿಯಲ್ಲಿರುವ ಅಕ್ಷರಗಳನ್ನು ಜೋಡಿಸಿ, ಕೃಷಿಗೆ ಸಂಬಂಧಿಸಿದ ಪದಗಳನ್ನು ಬರೆಯಿರಿ.

| | | | | | |
|---|---|---|---|---|---|
| ಲು | ನೊ | ನ | ಬೆ | ಡು | ಲೆ |
| ಡಿ | ಗೊ | ಗಂ | ರ | ದಾ | ಪ |
| ಕ | ಮೆ | ಟ್ಟ | ನೆ | ರೈ | ಮಾ |
| ನೇ | ಧ | ಳು | ರೆ | ಒ | ಗ |
| ತ್ತಿ | ಸಾ | ದಿ | ನ್ನ | ತ | ಕೆ |
| ಗಿ | ಉ | ಹಾ | ತ | ಜಿ | ಅ |

ಉದಾಹರಣೆಗೆ :

- ಗಂಧಸಾಲೆ
- ಒನಕೆ

..................................

.................................

## ❒ ಸಂಗ್ರಹಿಸಿರಿ

ಇದೇ ಆಶಯದ ಇತರ ಪದ್ಯಗಳನ್ನು ಸಂಗ್ರಹಿಸಿರಿ.

# ಕಾಯಕ ನಿಷ್ಠೆ

ಪರಮಾರ ವಂಶದ ಭೋಜರಾಜನು 11ನೇ ಶತಮಾನದಲ್ಲಿ ಮಧ್ಯ ಭಾರತದ ಮಾಲ್ವ ಪ್ರದೇಶವನ್ನು ಆಳುತ್ತಿದ್ದನು. ಅವನು ಪರಾಕ್ರಮಿಯಾಗಿದ್ದು; ತನ್ನ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಿದ್ದನು. ಭೋಜರಾಜ ತನ್ನ ಆಸ್ಥಾನದಲ್ಲಿ ಪಂಡಿತರಿಗೆ, ಕಲಾವಿದರಿಗೆ ಮತ್ತು ವಿಜ್ಞಾನಿಗಳಿಗೆ ಆಶ್ರಯ ನೀಡಿದ್ದನು. ಅವನು 'ಭೋಜ ಶಾಲಾ' ಎಂಬ ಸಂಸ್ಕೃತ ವಿದ್ಯಾಲಯವನ್ನು ಸ್ಥಾಪಿಸಿದ್ದನು. ಅವನು ದಯಾಳುವೂ, ಪ್ರಜಾನುರಾಗಿಯೂ ಆಗಿದ್ದನು. ಅವನು ತನ್ನ ರಾಜ್ಯದ ಸುತ್ತ ಮಾರುವೇಷದಲ್ಲಿ ತಿರುಗಾಡಿ ಪ್ರಜೆಗಳ ಕಷ್ಟ ಸುಖಗಳನ್ನು ತಿಳಿದುಕೊಳ್ಳುತ್ತಿದ್ದನು.

ಭೋಜರಾಜ ಒಮ್ಮೆ ತನ್ನ ಕಾರಭಾರಿಯ ಜೊತೆಗೆ ಮಾರುವೇಷದಲ್ಲಿ ತಿರುಗಾಡುತ್ತಾ ಒಂದು ಹಳ್ಳಿಗೆ ಹೋಗಿದ್ದನು. ಅಲ್ಲಿ ಒಂದು ಕರುಣಾಜನಕ ದೃಶ್ಯ ಅವನ ಕಣ್ಣಿಗೆ ಬಿತ್ತು. ಒಬ್ಬ ರೈತ ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟುವ ಬದಲು ಒಂದೇ ಎತ್ತನ್ನು ಕಟ್ಟಿ, ಹೊಲವನ್ನು ಉಳುತ್ತಿದ್ದನು. ಇನ್ನೊಂದು ಎತ್ತು ಇರಬೇಕಾದಲ್ಲಿ ತನ್ನ ಪತ್ನಿಯನ್ನು ಕಟ್ಟಿದ್ದನು. ಅವಳು ಕಷ್ಟದಿಂದ ಎತ್ತಿನ ಜೊತೆಗೆ ನೇಗಿಲನ್ನು ಎಳೆಯುತ್ತಿದ್ದಳು. ಭೋಜರಾಜನಿಗೆ ಹೃದಯವೇ ಬಾಯಿಗೆ ಬಂದಂತಾಯಿತು. ಅವನು ರೈತನ ಬಳಿಗೆ ಓಡಿದನು. "ಅಯ್ಯಾ, ಇದೇನು ಮಾಡುತ್ತಿದ್ದೀ? ನಿನ್ನ ಹೆಂಡತಿಯ ಯಾತನೆ ಕಾಣಿಸುತ್ತಿಲ್ಲವೇ? ಅವಳನ್ನು ಯಾಕೆ ನೊಗಕ್ಕೆ ಕಟ್ಟಿದ್ದೀ? ಹೆಂಡತಿಯನ್ನು ಹೀಗೆ ನೋಡಿಕೊಳ್ಳುತ್ತಾರೆಯೇ?" ಎಂದು ಗದರಿಸಿದನು. ತನ್ನೊಡನೆ ಮಾತಾನಾಡಿದ್ದು ಸ್ವಯಂ ಮಹಾರಾಜನೇ ಎಂದು ರೈತನಿಗೆ ತಿಳಿದಿರಲಿಲ್ಲ. ರೈತ ತನ್ನ ಕೆಲಸ ಮುಂದುವರಿಸಿದನು. "ಕೆಲಸ ನಿಲ್ಲಿಸಿ ನಿನಗೆ ಇದರ ಕಾರಣ ಹೇಳುವಷ್ಟು ನನಗೆ ಪುರುಸೊತ್ತಿಲ್ಲ. ಹೇಗಿದ್ದರೂ ಇವಳು ನನ್ನ ಪತ್ನಿ, ಇದು ನಮ್ಮ ಹೊಲ, ನಾನು ಏನು ಬೇಕಾದರೂ ಮಾಡುತ್ತೇನೆ" ಎಂದನು. ರಾಜ ಅವನ ಹಿಂದೆಯೇ ಹೋಗಿ ಅದರ ಕಾರಣ ಹೇಳುವ ತನಕ ಬಿಡಲಿಲ್ಲ. ಕೊನೆಗೂ ರೈತ ಮಾತನಾಡಿದನು. "ನನ್ನಲ್ಲಿ ಎರಡು ಎತ್ತುಗಳಿದ್ದವು, ಒಂದು ಇತ್ತೀಚೆಗೆ ತೀರಿ ಹೋಯಿತು. ನನ್ನ ಬಳಿ ಇನ್ನೊಂದು ಎತ್ತು ಖರೀದಿಸಲು ಹಣ ಇಲ್ಲ, ಈಗ ನಾನು ಹೊಲ ಉಳದಿದ್ದರೆ, ನಮ್ಮ ಹೊಲದಲ್ಲಿ ಏನನ್ನೂ

ಬೆಳೆಯಲು ಸಾಧ್ಯವಿಲ್ಲ. ನಾವು ಉಪವಾಸ ಬೀಳಬೇಕಾದೀತು. ನನ್ನ ಪತ್ನಿಯನ್ನು ನೊಗಕ್ಕೆ ಕಟ್ಟದೆ ಬೇರೆ ದಾರಿಯೇ ಇಲ್ಲ, ನನ್ನನ್ನೇ ನೊಗಕ್ಕೆ ಕಟ್ಟಿಕೊಳ್ಳುತ್ತಿದ್ದೆ, ಆದರೆ ಅವಳಿಗೆ ನೇಗಿಲು ಹಿಡಿದು ಉಳಲು ಸಾಧ್ಯವಿಲ್ಲ. ನಾನೇನು ಮಾಡಬಲ್ಲೆ?" ಎಂದನು. ಭೋಜರಾಜನಿಗೆ ಅವನ ಮೇಲೆ ದಯೆ ಹುಟ್ಟಿತು. "ಅಯ್ಯಾ, ನೀನು ನನ್ನ ಜೊತೆಗೆ ಬಾ, ನಿನಗೆ ಒಂದು ಎತ್ತು ಕೊಡುತ್ತೇನೆ. ನೀನೇನೂ ಹಣ ಕೊಡುವ ಅಗತ್ಯ ಇಲ್ಲ" ಎಂದನು. "ಸ್ವಾಮೀ, ನೀವು ದಯಾಳು, ನಾನು ಈಗ ಕೆಲಸ ಬಿಟ್ಟು ಬಂದರೆ ಬೀಜ ಬಿತ್ತುವ ಮೊದಲೇ ಮಳೆ ಬಂದೀತು. ನಾನು ಬರುವುದಿಲ್ಲ, "ನೀವು ನಿಜಕ್ಕೂ ನನಗೆ ಸಹಾಯ ಮಾಡುವುದಿದ್ದರೆ, ಎತ್ತನ್ನು ಇಲ್ಲಿಗೆ ತನ್ನಿ," ಎಂದು ಹೇಳಿ ರೈತನು ತನ್ನ ಕೆಲಸ ಮುಂದುವರಿಸಿದನು. ನೊಗಕ್ಕೆ ಕಟ್ಟಿದ ರೈತನ ಪತ್ನಿಯನ್ನು ಹಾಗೆ ಬಿಟ್ಟು ಹೋಗಲು ಭೋಜರಾಜನಿಗೆ ಮನಸ್ಸು ಬರಲಿಲ್ಲ. "ನಿನ್ನ ಹೆಂಡತಿ ನನ್ನ ಆಳಿನ ಜೊತೆಗೆ ನನ್ನ ಮನೆಗೆ ಹೋಗಲಿ. ನನ್ನ ಪತ್ನಿ ಅವಳಿಗೆ ಎತ್ತು ಕೊಡುತ್ತಾಳೆ. ಅಲ್ಲಿಯ ತನಕ ಅವಳ ಜಾಗದಲ್ಲಿ ನಾನು ಹೊಲ ಉಳುತ್ತೇನೆ" ಎಂದನು. ರೈತನು ರಾಜನ ಈ ಮಾತಿಗೆ ಅಡ್ಡಿ ಹೇಳುವಂತಿರಲಿಲ್ಲ. ಅವನು ತನ್ನ ಪತ್ನಿಯನ್ನು ನೊಗದಿಂದ ಬಿಡಿಸಿ ರಾಜನ ಕಾರಭಾರಿಯ ಜೊತೆಗೆ ಕಳುಹಿಸಿದನು. ಪತ್ನಿಯ ಜಾಗದಲ್ಲಿ ನೊಗಕ್ಕೆ ರಾಜನನ್ನು ಕಟ್ಟಿ ಕೆಲಸ ಮುಂದುವರಿಸಿದನು.



ಕಾರಭಾರಿ ರೈತನ ಪತ್ನಿಯನ್ನು ಅರಮನೆಗೆ ಒಯ್ದನು. ಅವನು ರಾಣಿಯನ್ನು ಭೇಟಿಯಾಗಿ ನಡೆದ ಕಥೆಯನ್ನು ತಿಳಿಸಿದನು. ರಾಣಿಯು ರಾಜನಂತೆಯೇ ದಯಾಳು ಆಗಿದ್ದಳು. "ನಮ್ಮ ಅರಮನೆಯ ಎತ್ತುಗಳು ಒಳ್ಳೆಯ ಆಹಾರ ತಿಂದು ಬಲಿಷ್ಠವಾಗಿ ಬೆಳೆದಿವೆ. ನೀನು ಒಂದು ಎತ್ತನ್ನು ಒಯ್ದರೆ ನಿಮ್ಮ ಮುದಿ ಎತ್ತಿನ ಜೊತೆಗೆ ಅದರ ಜೋಡಿ ಸರಿಯಾಗುವುದಿಲ್ಲ. ಅರಮನೆಯ ಎತ್ತು ವೇಗವಾಗಿ ಹೋಗುವಾಗ ಮುದಿ ಎತ್ತು ಕಾಲು ಜಾರಿ ಬಿದ್ದೀತು. ನಿನಗೆ ಎರಡು ಎತ್ತುಗಳನ್ನು ಕೊಡುತ್ತೇನೆ. ಹಾಗಾದರೆ ಸರಿಯಾಗಿ ಹೊಲ ಉಳಲು ಸಾಧ್ಯವಾದೀತು" ಎಂದಳು. ರೈತನ ಮಡದಿ ರಾಣಿಗೆ ಧನ್ಯವಾದಗಳನ್ನು ಹೇಳಿ ಎತ್ತುಗಳ ಜೊತೆಗೆ ಹಳ್ಳಿಗೆ ಧಾವಿಸಿದಳು.

ತನ್ನ ಜಾಗದಲ್ಲಿ ನೊಗವನ್ನು ಎಳೆದ ಮಹಾತ್ಮ ಬೇರೆ ಯಾರೂ ಅಲ್ಲ, ನಮ್ಮ ಮಹಾರಾಜರೇ ಎಂದು ತನ್ನ ಗಂಡನಿಗೆ ತಿಳಿಸಿದಳು. ಇದನ್ನು ಕೇಳಿದ ರೈತನಿಗೆ ಆಘಾತವಾಯಿತು. ಅವನು ರಾಜನ ಕಾಲಿಗೆರಗಿ ಕ್ಷಮೆ ಕೇಳಿದನು. "ಅನ್ನದಾತ, ನನ್ನಿಂದ ಮಹಾಪರಾಧವಾಯಿತು. ಇದಕ್ಕೆ ಯಾವ ಶಿಕ್ಷೆಯೂ ಕಡಿಮೆ" ಎಂದು ಕಣ್ಣೀರು ಹಾಕಿದನು. "ಅಯ್ಯಾ ಅನ್ನದಾತ ನಾನಲ್ಲ, ನೀನು. ಇಷ್ಟು ಕಷ್ಟ ಬಂದರೂ ಅಡ್ಡದಾರಿ ಹಿಡಿಯದೆ ಭೂಮಿಯ ಸೇವೆ ಮಾಡುತ್ತಿದ್ದಿ, ರಾಜ್ಯದ ದೊರೆ ನಾನು, ಆದರೆ ಭೂಮಿಯ ನಿಜವಾದ ರಕ್ಷಕ ನೀನೇ" ಎಂದು ಭೋಜರಾಜ ಅವನನ್ನು ಹೊಗಳಿದನು. "ನಿನಗೆ ಏನಾದರೂ ಕಷ್ಟ ಬಂದರೆ ಯಾವ ಸಂಕೋಚವೂ ಇಲ್ಲದೆ ನನ್ನ ಬಳಿಗೆ ಬಾ" ಎಂದು ಹೇಳಿ ರಾಜಧಾನಿಗೆ ಮರಳಿದನು. ಕಾಲಕ್ಕೆ ಸರಿಯಾಗಿ ಮಳೆ ಬಂತು. ರೈತನು ಹೊಲದಲ್ಲಿ ಬಿತ್ತನೆ ನಡೆಸಿದನು. ಬೆಳೆ ಬೆಳೆಯಿತು. ಅನ್ನದಾತ ನೆಮ್ಮದಿಯ ಜೀವನವನ್ನು ಸಾಗಿಸಿದನು.

- ಸಂಗ್ರಹ

## ಚಟುವಟಿಕೆಗಳು

### ❑ ಉತ್ತರಿಸಿರಿ

1. ರಾಜನಿಗೆ ಹಳ್ಳಿಯಲ್ಲಿ ಕಂಡ ಕರುಣಾಜನಕ ದೃಶ್ಯ ಯಾವುದು?
2. ರೈತನು ತನ್ನ ವ್ಯಥೆಯನ್ನು ರಾಜನಲ್ಲಿ ತೋಡಿಕೊಂಡ ಬಗೆ ಹೇಗೆ?
3. ರಾಣಿಯು ರೈತನ ಪತ್ನಿಯಲ್ಲಿ ಏನೆಂದು ಹೇಳಿದಳು?
4. ನೊಗವನ್ನು ಎಳೆದ ವ್ಯಕ್ತಿ ಮಹಾರಾಜನೆಂದು ತಿಳಿದಾಗ ರೈತನ ಪ್ರತಿಕ್ರಿಯೆ ಏನಾಗಿತ್ತು?

## ❐ ಕ್ರಮೀಕರಿಸಿ ಬರೆಯಿರಿ

ಈ ಕೆಳಗಿನ ವಾಕ್ಯಗಳನ್ನು ಕ್ರಮೀಕರಿಸಿ ಬರೆಯಿರಿ

- "ಅಯ್ಯಾ, ನೀನು ನನ್ನ ಜೊತೆಗೆ ಬಾ, ನಿನಗೆ ಒಂದು ಎತ್ತು ಕೊಡುತ್ತೇನೆ".
- ಒಬ್ಬ ರೈತ ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟುವ ಬದಲು ಒಂದೇ ಎತ್ತನ್ನು ಕಟ್ಟಿ, ಹೊಲ ಉಳುತ್ತಿದ್ದನು.
- ಅವನು ಪರಾಕ್ರಮಿಯಾಗಿದ್ದು, ತನ್ನ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಿದ್ದನು.
- ಅವನು ರಾಜನ ಕಾಲಿಗೆರಗಿ ಕ್ಷಮೆ ಕೇಳಿದನು.
- "ನೀವು ನಿಜಕ್ಕೂ ನನಗೆ ಸಹಾಯ ಮಾಡುವುದಿದ್ದರೆ, ಎತ್ತನ್ನು ಇಲ್ಲಿಗೆ ತನ್ನಿ".
- ನನ್ನಲ್ಲಿ ಎರಡು ಎತ್ತುಗಳಿದ್ದವು, ಒಂದು ಇತ್ತೀಚೆಗೆ ತೀರಿ ಹೋಯಿತು.

## ❐ ಸಂಭಾಷಣೆ ಬರೆಯಿರಿ

ಅರಮನೆಯಲ್ಲಿ ಕಾರಭಾರಿಯ ಮತ್ತು ರಾಣಿಯ ನಡುವೆ ನಡೆದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

ಕಾರಭಾರಿ : ಮಹಾರಾಣಿಗೆ ವಂದನೆಗಳು.

ರಾಣಿ : ಅಯ್ಯಾ, ಇವಳು ಯಾರು?

ಕಾರಭಾರಿ :

ರಾಣಿ :

ಕಾರಭಾರಿ :

ರಾಣಿ :

ಕಾರಭಾರಿ :

ರಾಣಿ :

## ❐ ಪಾತ್ರ ಚಿತ್ರಣ ಬರೆಯಿರಿ

ಕಾಯಕನಿಷ್ಠೆ ಕಥೆಯಲ್ಲಿ ಬಂದಿರುವ ರೈತನ ಪಾತ್ರ ಚಿತ್ರಣವನ್ನು ಕೆಳಗೆ ನೀಡಲಾಗಿದೆ.

### ಸ್ವಾಭಿಮಾನಿ ರೈತ

'ದುಡಿಮೆಯೇ ದೇವರು' ಎಂದು ತಿಳಿದು ರೈತನು ತನ್ನ ಹೊಲದಲ್ಲಿ ಅನುದಿನವೂ ದುಡಿಯುತ್ತಿದ್ದನು. ಬಡತನದ ಬೇಗೆಯಲ್ಲಿ ಬೇಯುತ್ತಿದ್ದರೂ ಕೃಷಿ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡು ತೃಪ್ತಿಯ ಜೀವನ ನಡೆಸುತ್ತಿದ್ದನು. ಒಂದು ಎತ್ತನ್ನು ಕಳೆದು ಕೊಂಡರೂ ಕೃಷಿಯಿಂದ ವಿಮುಖನಾಗದೆ ತನ್ನ ಕಾಯಕವನ್ನು ಮುಂದುವರಿಸಿದನು. ಪತಿಯ ಅಸಹಾಯಕತೆಯನ್ನು ತಿಳಿದ ಪತ್ನಿಯೂ ಪತಿಗೆ ಬೆಂಬಲವಾಗಿ ನಿಂತಳು. ಅವಳ ಅಪೇಕ್ಷೆಯಂತೆ ಆಕೆಯನ್ನೇ ಎತ್ತಿಗೆ ಬದಲಾಗಿ ಉಪಯೋಗಿಸಿಕೊಂಡು ಸ್ವಾಭಿಮಾನಿ ಅನ್ನದಾತನಾಗುತ್ತಾನೆ. ಸಮಯದ ಮಹತ್ವದ ಕಾಳಜಿಯುಳ್ಳ ರೈತನು ರಾಜನ ಆಮಂತ್ರಣವನ್ನು ನಯವಾಗಿ ತಿರಸ್ಕರಿಸುತ್ತಾನೆ.

**ಇದೇ ಮಾದರಿಯಲ್ಲಿ ಭೋಜರಾಜನ ಪಾತ್ರ ಚಿತ್ರಣವನ್ನು ಬರೆಯಿರಿ.**

## ❐ ಕತೆಯನ್ನು ಊಹಿಸಿ ಮುಂದುವರಿಸಿ ಬರೆಯಿರಿ

ಒಂದು ದಿನ ಭೋಜರಾಜನು ಮಾರುವೇಷದಲ್ಲಿ ತನ್ನ ಕಾರಭಾರಿಯೊಂದಿಗೆ ತಿರುಗಾಡುತ್ತಾ ಒಂದು ಹಳ್ಳಿಗೆ ಹೋಗಿದ್ದನು. ಒಬ್ಬ ರೈತ ಎರಡು ಎತ್ತುಗಳಲ್ಲಿ ಒಂದು ಎತ್ತಿನ ಬದಲು ತನ್ನ ಪತ್ನಿಯನ್ನು ಕಟ್ಟಿ ಉಳುವ ದೃಶ್ಯವನ್ನು ಕಂಡನು. ಮಹಿಳೆಯನ್ನು ಎತ್ತಿನಂತೆ ದುಡಿಸುವ ಆ ರೈತನ ವರ್ತನೆಯನ್ನು ಕಂಡು ರಾಜನು ಕೋಪದಿಂದ ಕಿಡಿಕಿಡಿಯಾದನು. ಆ ರೈತನನ್ನು ಬಂಧಿಸಿ ತರಲು ಕಾರಾಭಾರಿಗೆ ಆಜ್ಞಾಪಿಸಿದನು ..........................................

..........................................................................................................................

..........................................................................................................................

## ❒ ನುಡಿಗಟ್ಟುಗಳನ್ನು ಸಂಗ್ರಹಿಸಿ ಬರೆಯಿರಿ.

ಭೋಜರಾಜನಿಗೆ ಹೃದಯವೇ ಬಾಯಿಗೆ ಬಂದಂತಾಯಿತು.

ಅಡಿಗೆರೆ ಎಳೆದ ವಾಕ್ಯದ ಭಾಗವು ಒಂದು ನುಡಿಗಟ್ಟು ಆಗಿದೆ. ಕನ್ನಡ ಭಾಷೆಯಲ್ಲಿ ಗಾದೆಗಳಿಗಿರುವಂತೆ ನುಡಿಗಟ್ಟುಗಳಿಗೂ ತನ್ನದೇ ಆದ ಸ್ಥಾನವಿದೆ. ನಮ್ಮ ಮಾತಿನಲ್ಲಿ, ಬರವಣಿಗೆಗಳಲ್ಲಿ ವಿಶೇಷವಾದ ಅರ್ಥಗಳನ್ನು ತುಂಬಲು ನುಡಿಗಟ್ಟುಗಳು, ಗಾದೆಮಾತುಗಳು, ಉಪಮೆಯೇ ಮೊದಲಾದವುಗಳು ಸಹಾಯಕವಾಗುತ್ತವೆ. ಹಾಗೆಯೇ ಇದು ಮಾತಿನ ಸೊಗಸನ್ನು ಇಮ್ಮಡಿಗೊಳಿಸುತ್ತದೆ.

ಉದಾಹರಣೆಗೆ -

1) ಅಳಿಲ ಸೇವೆ - ನಿಷ್ಠೆಯ ಸೇವೆ
2) ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ - ಪಕ್ಷಪಾತ
3) ನಾಲಿಗೆ ಬಿಗಿಹಿಡಿ - ಮಿತವಾಗಿ ಮಾತನಾಡು
4) ಟೋಪಿ ಹಾಕು - ಮೋಸ ಮಾಡು

ಇಂತಹ ನುಡಿಗಟ್ಟುಗಳನ್ನು ಸಂಗ್ರಹಿಸಿ ಬರೆಯಿರಿ.

## ❒ ಈ ಕೆಳಗಿನ ಗದ್ಯಭಾಗವನ್ನು ಓದಿರಿ.

ರಮೇಶ ಮತ್ತು ಕುಸುಮ ಅಣ್ಣ ತಂಗಿಯರಾಗಿದ್ದರು. ರಮೇಶ ಮತ್ತು ಕುಸುಮ ಪ್ರತಿದಿನ ಶಾಲೆಗೆ ಜೊತೆಯಾಗಿ ಹೋಗುತ್ತಿದ್ದರು. ಶಾಲೆಗೆ ಹೋಗುವಾಗ ರಮೇಶ ಮತ್ತು ಕುಸುಮರ ಮನೆಯ ನಾಯಿಯೂ ಅವರನ್ನು ಹಿಂಬಾಲಿಸುತ್ತಿತ್ತು. ನಾಯಿಯು ಶಾಲೆಯ ತನಕ ಹೋಗುತ್ತಿತ್ತು. ಕುಸುಮಳ ತರಗತಿಯಲ್ಲಿ 15 ಮಂದಿ ವಿದ್ಯಾರ್ಥಿಗಳಿದ್ದರು. ರಮೇಶನ ತರಗತಿಯಲ್ಲಿ 20 ಮಂದಿ ವಿದ್ಯಾರ್ಥಿಗಳಿದ್ದರು.

ಮೇಲಿನ ವಾಕ್ಯಗಳಲ್ಲಿ 'ರಮೇಶ ಮತ್ತು ಕುಸುಮ' ಎಂಬ ನಾಮಪದವು ಪುನರಾವರ್ತನೆಯಾಗಿದೆ. ಹೀಗೆ ನಾಮಪದಗಳು ಪುನರಾವರ್ತನೆಯಾಗದಂತೆ ಅವುಗಳ ಬದಲಾಗಿ ಉಪಯೋಗಿಸುವ ಪದಗಳನ್ನು 'ಸರ್ವನಾಮ' ಎನ್ನುತ್ತೇವೆ.

**❐ ಈಗ ಗದ್ಯಭಾಗವನ್ನು ಓದಿರಿ.**

ರಮೇಶ ಮತ್ತು ಕುಸುಮ ಅಣ್ಣ ತಂಗಿಯರು. <u>ಅವರು</u> ಪ್ರತಿದಿನ ಶಾಲೆಗೆ ಜೊತೆಯಾಗಿ ಹೋಗುತ್ತಿದ್ದರು. ಶಾಲೆಗೆ ಹೋಗುವಾಗ <u>ಅವರ</u> ಮನೆಯ ನಾಯಿಯೂ <u>ಅವರನ್ನು</u> ಹಿಂಬಾಲಿಸುತ್ತಿತ್ತು. <u>ಅದು</u> ಶಾಲೆಯ ತನಕ ಹೋಗುತ್ತಿತ್ತು. <u>ಅವಳ</u> ತರಗತಿಯಲ್ಲಿ 15 ಮಂದಿ ವಿದ್ಯಾರ್ಥಿಗಳಿದ್ದರು. <u>ಅವನ</u> ತರಗತಿಯಲ್ಲಿ 20 ಮಂದಿ ವಿದ್ಯಾರ್ಥಿಗಳಿದ್ದರು.

ಮೇಲಿನ ಗದ್ಯಭಾಗದಲ್ಲಿ ಗುರುತಿಸಿದ ಸರ್ವನಾಮಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.

**ಉದಾಹರಣೆ**

ಹರೀಶ ಮತ್ತು ಸುರೇಶ ಆತ್ಮೀಯ ಗೆಳೆಯರಾಗಿದ್ದರು. ಹರೀಶ ಮತ್ತು ಸುರೇಶ ಐದನೇ ತರಗತಿಯಲ್ಲಿ ಕಲಿಯುತ್ತಿದ್ದರು.


ಹರೀಶ ಮತ್ತು ಸುರೇಶ ಆತ್ಮೀಯ ಗೆಳೆಯರಾಗಿದ್ದರು. ಅವರು ಐದನೇ ತರಗತಿಯಲ್ಲಿ ಕಲಿಯುತ್ತಿದ್ದರು.

# ಜೇನು ಕೃಷಿ

ಜೇನು ನೈಸರ್ಗಿಕವಾಗಿ ದೊರೆಯುವ ಅಮೃತ. ಜೇನುತುಪ್ಪ ಮತ್ತು ಜೇನು ಮಯಣದ ಉಪಯೋಗಗಳ ಬಗ್ಗೆ ನಮಗೆ ಪುರಾಣಕಾಲದಿಂದಲೂ ಗೊತ್ತಿದ್ದು ಜೇನುನೊಣಗಳು ಮಾನವನಿಗೆ ಬಹುಪಯೋಗಿ ಜೀವಿಗಳೆಂದು ಪರಿಗಣಿಸಲ್ಪಟ್ಟಿವೆ. ಇವುಗಳು ಸಿಹಿಯಾದ, ಪೌಷ್ಟಿಕವಾದ ಮತ್ತು ಔಷಧೀಯ ಗುಣವುಳ್ಳ ತುಪ್ಪವನ್ನು ಒದಗಿಸುವುದರ ಜೊತೆಗೆ ಪರಾಗಸ್ಪರ್ಶ ಕ್ರಿಯೆಯಲ್ಲಿ ಪಾಲ್ಗೊಂಡು ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯಕವಾಗಿವೆ. ಕಾಡಿನಲ್ಲಿ ಜೇನುಗೂಡುಗಳನ್ನು ಹುಡುಕಿ ಜೇನುತುಪ್ಪವನ್ನು ಹಿಂಡಿ ತೆಗೆಯುವುದು ಬಹಳ ಹಿಂದಿನಿಂದಲೂ ನಡೆದು ಬಂದ ಪದ್ಧತಿ. ಸುಮಾರು 400 ವರ್ಷಗಳ ಹಿಂದೆ ಟೊಳ್ಳಾದ ಮರಗಳಲ್ಲಿ ಅಥವಾ ಮಡಕೆಗಳಲ್ಲಿ ಜೇನು ಸಾಕಣೆ ಪ್ರಾರಂಭವಾಯಿತು. ಕ್ರಿ.ಶ. 1919ರ ನಂತರ ಜೇನುಸಾಕಣೆಗೆಂದೇ ನಿರ್ಮಿಸಿದ ಬೇರ್ಪಡಿಸಬಹುದಾದ ಮರದ ಚೌಕಟ್ಟುಗಳ ಜೇನುಪೆಟ್ಟಿಗೆಗಳು ಭಾರತದಲ್ಲಿ ಬಳಕೆಗೆ ಬಂದವು. ನಮ್ಮ ದೇಶದಲ್ಲಿ ಒಟ್ಟು ಐದು ಜೇನುನೊಣಗಳ ಪ್ರಭೇದಗಳಿವೆ. ಅವುಗಳಲ್ಲಿ ಒಂದನ್ನು ಮಾತ್ರ ವಿದೇಶದಿಂದ ತರಲಾಗಿದೆ. 'ತುಡುವೆ ಜೇನು' ಎಂಬ ಭಾರತೀಯ ತಳಿಯನ್ನು ಹೆಚ್ಚಾಗಿ ಜೇನು ಕೃಷಿಗೆ ಬಳಸುತ್ತಾರೆ.

ಜೇನುನೊಣಗಳು ಮಯಣದಿಂದ ಜೇನುಹುಟ್ಟನ್ನು ಮಾಡುತ್ತವೆ. ಇದರಲ್ಲಿ ಸಾವಿರಾರು ಕೋಶಗಳು ಇರುತ್ತವೆ. ಅವುಗಳು ಷಡ್ಭುಜ ಆಕೃತಿಯನ್ನು ಹೊಂದಿರುತ್ತವೆ. ಮಯಣವು ಎಳೆಯ ಜೇನುನೊಣಗಳ ಹೊಟ್ಟೆಯ ತಳಭಾಗದಲ್ಲಿರುವ ಮಯಣ ಗ್ರಂಥಿಗಳಿಂದ ಸ್ರವಿಸಲ್ಪಡುತ್ತದೆ. ಈ ಗ್ರಂಥಿಗಳಿಂದ ಸ್ರವಿಸಿದ ಮಯಣವನ್ನು ಕೆಲಸಗಾರ ನೊಣಗಳು ಸಂಗ್ರಹಿಸಿ ಜೇನುಹುಟ್ಟುಗಳನ್ನು ನಿರ್ಮಾಣ ಮಾಡುತ್ತವೆ. ಮಯಣವನ್ನು ಸಾಧಾರಣ ಒಂದು ಅಥವಾ ಎರಡು ವಾರ ಪ್ರಾಯದ ನೊಣಗಳು ಮಾತ್ರ ಹೆಚ್ಚಾಗಿ ಉತ್ಪಾದಿಸುತ್ತವೆ. ಸಾಮಾನ್ಯವಾಗಿ ಜೇನುಹುಟ್ಟಿನ ಮೇಲ್ಭಾಗದ ಕೋಶದಲ್ಲಿ ಜೇನುತುಪ್ಪ ಇರುತ್ತದೆ. ಇದಕ್ಕಿಂತ ಸ್ವಲ್ಪ ತಳಭಾಗದಲ್ಲಿ ಪರಾಗ ಸಂಗ್ರಹ, ಉಳಿದ ಕೋಶಗಳಲ್ಲಿ ಮೊಟ್ಟೆ ಮತ್ತು ಮರಿಹುಳಗಳಿರುತ್ತವೆ. ಹೊಸ ರಾಣಿಹುಳ ಬೆಳೆಯುವ ಸಂದರ್ಭದಲ್ಲಿ ದುಂಡಾದ ರಾಣಿ ಕೋಶಗಳು ಜೇನುಹುಟ್ಟಿನ ಕೆಳಭಾಗದಲ್ಲಿ ಇರುತ್ತವೆ.

ಜೇನು ಸಾಕಣೆ ಪ್ರಾರಂಭಿಸುವವರು ಮೊದಲು ಜೇನುನೊಣಗಳ ಕುಟುಂಬದ ರಚನೆ ಮತ್ತು ಅವುಗಳ ಸ್ವಭಾವದ ಬಗ್ಗೆ ಅಭ್ಯಸಿಸಿರಬೇಕು. ಎರಡನೆಯದಾಗಿ ಜೇನು



ಸಾಕಣೆ ಉಪಕರಣಗಳು, ಅವುಗಳ ಉಪಯೋಗ ಮತ್ತು ಜೇನುಕೃಷಿಗೆ ನೆರವಾಗುವ ಸಸ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಜೇನು ಸಾಕಣೆಯ ಸ್ಥಳದಿಂದ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಹೂಗಳಲ್ಲಿ ಇರುವ ಮಕರಂದ ಮತ್ತು ಪರಾಗ, ವರ್ಷಪೂರ್ತಿ ಸಿಗುವಂತೆ ಸಸ್ಯಸಂಪತ್ತಿರಬೇಕು. ಹೊಗೆ ಮತ್ತಿತರ ಪರಿಸರ ಮಾಲಿನ್ಯದಿಂದ ದೂರವಿದ್ದು ಹತ್ತಿರದಲ್ಲಿ ಸ್ವಚ್ಛವಾದ ನೀರು ಸಿಗುವಂತಿರಬೇಕು. ಜೇನುಪೆಟ್ಟಿಗೆಯನ್ನು ಇರಿಸುವ ಸ್ಥಳದಲ್ಲಿ ಮಳೆ, ಗಾಳಿ ಮತ್ತು ಬಿಸಿಲಿನಿಂದ ರಕ್ಷಣೆ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಆಹಾರದ ಅಭಾವವಿರುವ ಕಾಲದಲ್ಲಿ ಜೇನುನೊಣಗಳಿಗೆ ಆಹಾರ ಕೊಡುವ ಪದ್ಧತಿ ಇದೆ. ಸಮಪ್ರಮಾಣದ ನೀರು ಮತ್ತು ಸಕ್ಕರೆಯನ್ನು ಬೆರೆಸಿ ಮಾಡಿದ ಪಾಕವನ್ನು ತಟ್ಟೆಯಲ್ಲಿಟ್ಟು ಅದಕ್ಕೆ ನಾಲ್ಕಾರು ಕಡ್ಡಿಗಳನ್ನು ಹಾಕಿಡಬೇಕು. ಆ ಬಳಿಕ ತಟ್ಟೆಯನ್ನು ಚೌಕಟ್ಟುಗಳ ಮೇಲ್ಭಾಗದಲ್ಲಿಟ್ಟು ಮುಚ್ಚಳವನ್ನು ಮುಚ್ಚಬೇಕು. ಜೇನುನೊಣಗಳು ಕಡ್ಡಿಗಳ ಮೇಲೆ ಕುಳಿತು ಸಕ್ಕರೆಪಾಕವನ್ನು ಹೀರಿಕೊಳ್ಳುತ್ತವೆ.

ಜೇನು ಕುಟುಂಬಗಳನ್ನು ಜೇನುಪೆಟ್ಟಿಗೆಗಳಲ್ಲಿಟ್ಟು ನಂತರ ವಾರಕ್ಕೊಮ್ಮೆ ಅವುಗಳನ್ನು ಪರೀಕ್ಷಿಸುತ್ತಿರಬೇಕು. ಹಗಲು ಹೊತ್ತು ಮಾತ್ರ ಪೆಟ್ಟಿಗೆಗಳನ್ನು ತೆರೆದು ಪರೀಕ್ಷಿಸಿ, ನಂತರ

ಹಿಂದಿನಂತೆಯೇ ಸ್ವಸ್ಥಾನಗಳಲ್ಲಿ ಇಡಬೇಕು. ಪೆಟ್ಟಿಗೆಗಳನ್ನು ನಾವು ಪರೀಕ್ಷಿಸುವಾಗ ಪೆಟ್ಟಿಗೆಯ ಮುಂಭಾಗದಲ್ಲಿ ನಿಲ್ಲಬಾರದು. ಪೆಟ್ಟಿಗೆಯ ಹೊರಮುಚ್ಚಳವನ್ನು ನಿಧಾನವಾಗಿ ತೆಗೆಯಬೇಕು. ಜೇನುನೊಣಗಳು ಜಾಸ್ತಿ ಚುಚ್ಚುತ್ತಿದ್ದರೆ ಹೊಗೆತಿದಿಯಿಂದ ಹೊಗೆ ಹಾಕುವ ಸಂಪ್ರದಾಯವಿದೆ. ಬಳಿಕ ಚೌಕಟ್ಟುಗಳನ್ನು ನಿಧಾನವಾಗಿ ಎತ್ತಿ ಪರೀಕ್ಷಿಸಬೇಕು. ಜೇನುನೊಣ ಚುಚ್ಚಿದರೆ ಗಾಬರಿಯಾಗಬಾರದು. ಚುಚ್ಚಿದ ಭಾಗದಲ್ಲಿರುವ ಮುಳ್ಳು ತೆಗೆದು ಆ ಜಾಗಕ್ಕೆ ತಕ್ಷಣ ಯಾವುದಾದರೂ ಎಲೆರಸವನ್ನು ಹಚ್ಚಬೇಕು. ಕುಟುಂಬದಲ್ಲಿ ರಾಣಿನೊಣ ಇಲ್ಲದಿದ್ದಲ್ಲಿ ಬೇರೆ ಕುಟುಂಬದಿಂದ ರಾಣಿನೊಣದ ಕೋಶವನ್ನು ಕತ್ತರಿಸಿ ತಂದು ಸೇರಿಸಬೇಕು. ಇದು ಸಾಧ್ಯವಾಗದಿದ್ದಲ್ಲಿ ರಾಣಿ ಇಲ್ಲದ ಕುಟುಂಬವನ್ನು ಇನ್ನೊಂದು ರಾಣಿ ಇರುವ ಕುಟುಂಬದೊಂದಿಗೆ ಸೇರಿಸಬೇಕು. ಜೇನು ಚೌಕಟ್ಟುಗಳನ್ನು ಪರೀಕ್ಷಿಸಿದಾಗ ಜೇನು ತುಂಬಿರುವ ಕೋಶಗಳು ಮುಚ್ಚಿದ್ದರೆ ಜೇನುತುಪ್ಪ ಪಕ್ವವಾಗಿದೆ ಎಂದು ತಿಳಿದು ಕೈಯಂತ್ರದಿಂದ ಜೇನುತುಪ್ಪ ತೆಗೆಯಬೇಕು. ಜೇನುತುಪ್ಪ ಒಂದು ಉತ್ತಮವಾದ ಕೃತಕವಲ್ಲದ ಸಿಹಿಯಾದ ದ್ರವರೂಪದ ಪೌಷ್ಟಿಕ ಆಹಾರ. ವಿಜ್ಞಾನ ಎಷ್ಟೇ ಮುಂದುವರಿದರೂ ಜೇನುತುಪ್ಪವನ್ನು ಕೃತಕವಾಗಿ ತಯಾರಿಸಲು ನಮಗೆ ಸಾಧ್ಯವಾಗಿಲ್ಲ. ಜೇನುತುಪ್ಪ ಮಾಡಲು ಜೇನುನೊಣಗಳಿಂದ ಮಾತ್ರ ಸಾಧ್ಯ. ಅದಕ್ಕೆ ಹೇಳುವುದು 'ಪ್ರಕೃತಿಗೆ ಪ್ರಕೃತಿಯೇ ಸಾಟಿ'.

- ಸಂಗ್ರಹ

## ಚಟುವಟಿಕೆಗಳು

### ❐ ಉತ್ತರಿಸಿರಿ

1. ಜೇನುಹುಟ್ಟು ಹೇಗೆ ನಿರ್ಮಾಣವಾಗುತ್ತದೆ?
2. ಆಹಾರದ ಅಭಾವವಿರುವ ಸಂದರ್ಭದಲ್ಲಿ ಜೇನುನೊಣಗಳಿಗೆ ಹೇಗೆ ಆಹಾರವನ್ನು ಕೊಡುತ್ತಾರೆ?
3. ಜೇನುಸಾಕಣೆ ಪ್ರಾರಂಭಿಸುವವರು ಗಮನಿಸಬೇಕಾದ ಪ್ರಧಾನ ಅಂಶಗಳು ಯಾವುವು?

### ❐ ಟಿಪ್ಪಣಿ ತಯಾರಿಸಿರಿ

ನಿಮಗೆ ತಿಳಿದಿರುವ ಯಾವುದಾದರೂ ಒಂದು ಕೃಷಿಯ ಬಗ್ಗೆ ಟಿಪ್ಪಣಿ ತಯಾರಿಸಿರಿ.

## ❒ ಸಂದರ್ಶನ ಪ್ರಶ್ನಾವಳಿ

ನಿಮ್ಮ ಊರಿನಲ್ಲಿರುವ 'ಜೇನುಕೃಷಿಕ'ರನ್ನು ಸಂದರ್ಶಿಸಲು ಬೇಕಾದ ಪ್ರಶ್ನಾವಳಿಯನ್ನು ತಯಾರಿಸಿರಿ.

## ❒ ಪ್ರಬಂಧ ರಚನೆ

ಜೇನುಕೃಷಿಯ ಕುರಿತು ತಿಳಿದುಕೊಂಡಿದ್ದೀರಿ. ಅಂತೆಯೇ ಹೈನುಗಾರಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಪ್ರಬಂಧ ಬರೆಯಿರಿ.

## ❒ ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳ ವಿರುದ್ಧಾರ್ಥಕ ಪದಗಳನ್ನು ಉಪಯೋಗಿಸಿ ವಾಕ್ಯ ರಚಿಸಿರಿ.

1. ಜೇನು ಬಹಳ <u>ಉಪಯುಕ್ತವಾದ</u> ಆಹಾರವಾಗಿದೆ.
2. ಚೌಕಟ್ಟುಗಳ <u>ಮೇಲ್ಭಾಗದಲ್ಲಿ</u> ಮುಚ್ಚಳವನ್ನು ಇಡಬೇಕು.
3. ವಾಹನಗಳನ್ನು <u>ನಿಧಾನವಾಗಿ</u> ಚಲಾಯಿಸಬೇಕು.
4. ಮಾನವನಿಗೆ <u>ಅಸಾಧ್ಯ</u> ಎಂಬುದು ಬಹಳ ಕಡಿಮೆ.

## ❒ ಬಿಂಗಡಿಸಿ ಬರೆಯಿರಿ

ಈ ಕೆಳಗೆ ನೀಡಲಾದ ಪದಗಳನ್ನು ಬಿಂಗಡಿಸಿ ಬರೆಯಿರಿ.

1) ಅಭಾವವಿರುವ = ಅಭಾವ + ಇರುವ

2) ಸಂಪತ್ತಿರಬೇಕು =

3) ಪೆಟ್ಟಿಗೆಗಳಲ್ಲಿಟ್ಟು =

4) ಗಾಬರಿಯಾಗಬಾರದು =

5) ಸಿಗುವಂತಿರಬೇಕು =

# 2. ಜೀವನ ಮೌಲ್ಯ






ಚಿತ್ರವನ್ನು ವೀಕ್ಷಿಸಿ ಇದರ ಕುರಿತು ಚರ್ಚಿಸಿ ಲಘು ಟಿಪ್ಪಣಿ ಬರೆಯಿರಿ.

# ಸಮಯದ ಮಹತ್ವ

ಅಕ್ಬರ್ ಬಾದಶಹ ಮಹಾಪರಾಕ್ರಮಿ, ಬುದ್ಧಿಶಾಲಿ, ಪ್ರತಿಭಾವಂತ ಎಂಬ ವಿಚಾರಗಳು ಎಲ್ಲರಿಗೂ ತಿಳಿದಿದೆ. ಅವನು ಒಮ್ಮೊಮ್ಮೆ ಆಸ್ಥಾನದಲ್ಲಿ ಕೆಲವು ವಿಚಿತ್ರ ಪ್ರಶ್ನೆಗಳನ್ನು ಕೇಳುವುದರ ಮೂಲಕ ಎಲ್ಲರನ್ನೂ ಗೊಂದಲಕ್ಕೆ ಒಳಗಾಗುವಂತೆ ಮಾಡುತ್ತಿದ್ದನು. ಇಂಥ ಪ್ರಶ್ನೆಗಳಿಂದ ಬಾದಶಹನ ಸಾಮರ್ಥ್ಯಗಳ ಬಗ್ಗೆ ಅನುಮಾನ ಹುಟ್ಟುವಂತಾಗುತ್ತಿತ್ತು.

ಒಮ್ಮೆ ಅಕ್ಬರ್ ಬಾದಶಹ ಬೀರಬಲ್ಲನನ್ನು ಪ್ರಶ್ನಿಸಿದನು. "ಪ್ರಧಾನ ಮಂತ್ರಿಗಳೇ, ನಾನು ಬಹಳಷ್ಟು ಮಂದಿ ಜಾಣರನ್ನು ಕಂಡಿದ್ದೇನೆ. ಅವರ ಮಾತಿನಿಂದಲೇ ಅವರ ಜಾಣತನವನ್ನು ಗುರುತಿಸಬಹುದು. ಆದರೆ ಮೂರ್ಖರನ್ನು ಗುರುತಿಸುವುದು ಹೇಗೆ?"

ಆಗ ಬೀರಬಲ್ಲನು ನುಡಿದನು. "ಮಹಾಸ್ವಾಮಿ, ಮೂರ್ಖರನ್ನೂ ಸಹ ಅವರ ಮಾತಿನಿಂದಲೇ ಗುರುತಿಸಬಹುದು. ಅದು ಅಂತಹ ಕಠಿಣವಾದ ಕೆಲಸವಲ್ಲ." ಅದಕ್ಕೆ ಅಕ್ಬರನು "ನನಗೆ ಹಾಗೆ ಅನಿಸುವುದಿಲ್ಲ. ಒಂದು ವೇಳೆ ಅದು ನಿನಗೆ ಸುಲಭದ ಕೆಲಸವಾಗಿದ್ದರೆ ನಾಳೆ ಸಂಜೆಯ ಒಳಗೆ ಐದಾರು ಜನ ಮೂರ್ಖರನ್ನು ಕರೆದು ತಂದು ತೋರಿಸು" ಎಂದನು.

ಬೀರಬಲ್ಲನು ರಾಜಾಜ್ಞೆಯಂತೆ ಮರುದಿನ ಮೂರ್ಖರನ್ನು ಹುಡುಕಲು ಹೊರಟನು. ಸ್ವಲ್ಪ ದೂರ ಹೋದ ಮೇಲೆ ಒಬ್ಬ ವ್ಯಕ್ತಿ ಕುದುರೆ ಏರಿ ಬರುತ್ತಿದ್ದನು. ಅವನ ತಲೆಯ ಮೇಲೆ ಒಂದು ಮೂಟೆ ಇದ್ದಿತು. ಬೀರಬಲ್ಲನು ಅವನನ್ನು ತಡೆದು "ಇದೇನಯ್ಯಾ, ತಲೆಯ ಮೇಲೆ ಮೂಟೆ ಇರಿಸಿಕೊಂಡಿರುವೆ?" ಎಂದು ಕೇಳಿದನು. ಆ ವ್ಯಕ್ತಿ "ನಾನು ಕೈಗಳಲ್ಲಿ ಕುದುರೆಯ ಲಗಾಮು ಹಿಡಿದಿರುವುದರಿಂದ ನನ್ನ ಕೈಗಳು ಖಾಲಿ ಇಲ್ಲ" ಎಂದು ಉತ್ತರಿಸಿದನು.

ಬೀರಬಲ್ಲನು "ಆ ಮಾತು ನಿಜವಾದರೂ ಮೂಟೆಯನ್ನು ನಿನ್ನ ಹಿಂಬದಿಗೆ ಇಟ್ಟುಕೊಳ್ಳಬಹುದಿತ್ತಲ್ಲ. ಮೂಟೆಯನ್ನು ತಲೆಯ ಮೇಲೆ ಹೊರುವುದರಿಂದ ನಿನಗಾದ ಪ್ರಯೋಜನವೇನು?" ಎಂದು ಪ್ರಶ್ನಿಸಿದನು. ಇದಕ್ಕೆ ಉತ್ತರವಾಗಿ ಆ ವ್ಯಕ್ತಿ "ಅಯ್ಯಾ ಮೂರ್ಖ, ನನ್ನ ಕುದುರೆ ಮುದಿಯಾಗಿದೆ. ಹೆಚ್ಚು ಭಾರವನ್ನು ಅದಕ್ಕೆ ಹೊರಲಾಗುವುದಿಲ್ಲ. ಹೀಗಿರುವಾಗ ಮೂಟೆಯನ್ನು ಅದರ ಬೆನ್ನ ಮೇಲೆ ಇರಿಸಿದರೆ ನನ್ನ ಭಾರ ಹಾಗೂ

ಮೂಟೆಯ ಭಾರ ಎರಡನ್ನೂ ಹೊರಲಾರದೆ ಅದು ಪ್ರಾಣ ಬಿಡುತ್ತದೆ. ಆದ್ದರಿಂದಲೇ ಮೂಟೆಯನ್ನು ನನ್ನ ತಲೆಯ ಮೇಲೆ ಹೊತ್ತಿದ್ದೇನೆ. ಅರ್ಥವಾಯಿತೇ?'' ಎಂದನು.

ಬೀರಬಲ್ಲನು ''ಅರ್ಥವಾಯಿತು ಸ್ವಾಮಿ'' ಎಂದು ಹೇಳುತ್ತ ಅವನ ಹೆಸರು ವಿಳಾಸ ಎಲ್ಲವನ್ನೂ ಬರೆದುಕೊಂಡು ಮುಂದೆ ಹೊರಟನು. ಬೀರಬಲ್ಲನು ಮತ್ತಷ್ಟು ದೂರ ಹೋದ ಮೇಲೆ ಎದುರುಗಡೆಯಿಂದ ಬಂದ ವ್ಯಕ್ತಿಯೊಬ್ಬ ಬೀರಬಲ್ಲನಿಗೆ ಢಿಕ್ಕಿ ಹೊಡೆದನು. ಅವನು ತುಂಬ ಅವಸರದಲ್ಲಿದ್ದಂತೆ ಕಂಡುಬಂದಿತು. ಆ ವ್ಯಕ್ತಿ ''ದಯವಿಟ್ಟು ಕ್ಷಮಿಸಿ'' ಎಂದನು. ಬೀರಬಲ್ಲನು ''ಬಹಳ ಗಡಿಬಿಡಿಯಲ್ಲಿ ಹೊರಟಿರುವಂತೆ ಕಾಣುತ್ತಿದೆಯಲ್ಲ?'' ಎಂದು ಅವನಲ್ಲಿ ಹೇಳಿದನು.

ಆ ವ್ಯಕ್ತಿ ''ನಿಜ, ನಾನು ಅವಸರದಲ್ಲಿದ್ದೆ. ನನ್ನ ಧ್ವನಿ ಎಷ್ಟು ದೂರ ಹೋಗಿದೆ ಎನ್ನುವುದನ್ನು ನಾನು ಕಾಣಬೇಕಾಗಿತ್ತು'' ಎಂದನು. ಆಗ ಬೀರಬಲ್ಲನು ''ನಿಮ್ಮ ಮಾತಿನ ಅರ್ಥ ತಿಳಿಯಲಿಲ್ಲ'' ಎಂದನು. ಆ ವ್ಯಕ್ತಿ ''ನಾನು ಪೇಟೆಯ ಒಂದು ಚೌಕಿನಲ್ಲಿ ನಿಂತು ಕೂಗಿ ಕೊಂಡೆ! ಆ ಕೂಗು ಎಷ್ಟು ದೂರ ಹೋಗಿದೆ ಎನ್ನುವುದನ್ನು ಕಾಣಬೇಕಿತ್ತು. ಆದರೆ ನಿಮಗೆ ಢಿಕ್ಕಿ ಹೊಡೆದದ್ದರಿಂದ ನಾನು ನಿಲ್ಲಬೇಕಾಯಿತು. ಇಲ್ಲದಿದ್ದಲ್ಲಿ ನಾನು ಆ ಸ್ಥಳವನ್ನು ತಲುಪಬಹುದಾಗಿತ್ತು.'' ಎಂದನು.

ಬೀರಬಲ್ಲನು ಆ ವ್ಯಕ್ತಿಯ ಹೆಸರು ವಿಳಾಸವನ್ನು ಬರೆದುಕೊಂಡು ಮುಂದೆ ಹೊರಟನು. ಅಷ್ಟರಲ್ಲಿ ಬೀರಬಲ್ಲನಿಗೆ ಒಂದು ಧ್ವನಿ ಕೇಳಿಸಿತು. ಅವನು ಆ ದಿಕ್ಕಿನತ್ತಲೇ ಹೋಗಿ ನೋಡಿದಾಗ ಒಬ್ಬ ಮನುಷ್ಯನು ಒಂದು ನೀರಿನ ಹಳ್ಳದಲ್ಲಿ ಬಿದ್ದು ಸಹಾಯಕ್ಕಾಗಿ ಕೂಗುತ್ತಿದ್ದನು. ಬೀರಬಲ್ಲನು ಅವನ ಹತ್ತಿರಕ್ಕೆ ಹೋಗಿ ತನ್ನ ಕೈಗಳನ್ನು ಚಾಚಿ ಅವನನ್ನು ಎತ್ತಲು ಪ್ರಯತ್ನಿಸಿದನು. ಆದರೆ ಅವನು ''ಸ್ವಾಮಿ, ನನ್ನ ಕೈಗಳನ್ನು ಹಿಡಿದು ಎಳೆಯಬೇಡಿರಿ, ನನ್ನ ತಲೆಗೂದಲನ್ನು ಹಿಡಿದು ಹೊರಗೆಳೆಯಿರಿ'' ಎಂದನು.

ಬೀರಬಲ್ಲನು ''ನಿಮ್ಮ ಕೈಗಳಿಗೆ ಏನಾದರೂ ಆಗಿದೆಯೇ?'' ಎಂದನು. ಆ ಮನುಷ್ಯನು ''ಮೊದಲು ನಾನು ಹೇಳಿದಂತೆ ಮಾಡಿ.'' ಎಂದು ಹೇಳಿದನು.

ಬೀರಬಲ್ಲನು ಅವನು ಹೇಳಿದಂತೆ ತಲೆಗೂದಲನ್ನು ಹಿಡಿದು ಹೊರಗೆಳೆದನು. ಆ ವ್ಯಕ್ತಿಯು ತನ್ನ ಚಾಚಿದ ಕೈಗಳನ್ನು ಹಾಗೆಯೇ ಚಾಚಿಕೊಂಡಿದ್ದನು. ಬೀರಬಲ್ಲನು ಕುತೂಹಲದಿಂದ ಅದರ ಕಾರಣವನ್ನು ಅವನಲ್ಲಿ ಕೇಳಿದನು. ಅದಕ್ಕೆ ಅವನು ''ನಾನು

ಬಡಗಿಯ ಮನೆಗೆ ಹೋಗಿದ್ದೆ. ನನ್ನ ಮನೆಗೆ ಒಂದು ಮರದ ಕಪಾಟು ಮಾಡಿಸಬೇಕಾಗಿತ್ತು. ಬಡಗಿ ಅದರ ಅಳತೆಯನ್ನು ಕೇಳಿದನು. ಅದು ನನಗೆ ಗೊತ್ತಿಲ್ಲದಿದ್ದುದರಿಂದ ಮನೆಗೆ ಹೋಗಿ ಅಳತೆ ಮಾಡಿಕೊಂಡು ಬಂದೆನು. ಆ ಅಳತೆಯು ನನ್ನ ಚಾಚಿದ ಕೈಗಳಷ್ಟಿದೆ. ಕೈಗಳನ್ನು ಹಾಗೆಯೇ ಚಾಚಿಕೊಂಡು ಬಡಗಿಯ ಮನೆಗೆ ಬರುತ್ತಿರುವಾಗ ಈ ಹಳ್ಳದಲ್ಲಿ ಬಿದ್ದೆನು. ಆದರೂ ಕಪಾಟಿನ ಅಳತೆ ಮರೆಯಬಾರದೆಂದು ಚಾಚಿದ ಕೈಗಳನ್ನು ಹಾಗೆಯೇ ಹಿಡಿದುಕೊಂಡಿರುವೆ. ಅದಕ್ಕೆ ನಾನು ನನ್ನ ಕೂದಲನ್ನು ಹಿಡಿದು ಹೊರಗೆಳೆಯಿರಿ ಎಂದದ್ದು'' ಎಂದನು.

ಬೀರಬಲ್ಲನು ಆ ವ್ಯಕ್ತಿಯ ಹೆಸರು ವಿಳಾಸವನ್ನು ಬರೆದುಕೊಂಡು ಬಳಿಕ ನದಿಯ ತೀರಕ್ಕೆ ಹೋದನು. ಒಬ್ಬ ಮನುಷ್ಯನು ನದಿ ದಂಡೆಯ ಮರಳ ರಾಶಿಯಲ್ಲಿ ಏನನ್ನೋ ಹುಡುಕುತ್ತಿರುವುದು ಕಂಡಿತು. ಬೀರಬಲ್ಲನು ಆ ವ್ಯಕ್ತಿಯಲ್ಲಿ ``ಅಯ್ಯಾ ಏನು ಹುಡುಕುತ್ತಿರುವೆ'' ಎಂದು ಪ್ರಶ್ನಿಸಿದನು. ``ನನ್ನ ರತ್ನಖಚಿತ ಉಂಗುರವನ್ನು ಹುಡುಕುತ್ತಿದ್ದೇನೆ'' ಎಂದು ಅವನು ಉತ್ತರಿಸಿದನು. ಬೀರಬಲ್ಲನು ``ಏನು ರತ್ನಖಚಿತ ಉಂಗುರವೇ? ಅದನ್ನು ಎಲ್ಲಿ ಇಟ್ಟಿದ್ದೆ?'' ಎಂದು ಅಚ್ಚರಿಗೊಂಡು ಕೇಳಿದನು. ``ನದಿಯಲ್ಲಿ ಸ್ನಾನಕ್ಕೆ ಹೋಗುವ ಮೊದಲು ಅದನ್ನು ಇಲ್ಲಿಯೇ ಎಲ್ಲೋ ಇಟ್ಟಿದ್ದೆ'' ಎಂದನು.

``ಅಂಥ ಬೆಲೆಬಾಳುವ ಉಂಗುರವನ್ನು ಮರಳರಾಶಿಯಲ್ಲಿ ಇಡಬೇಕಾದರೆ ನೀನು ಎಂತಹ ನಿರ್ಲಕ್ಷ್ಯನು! ಹೋಗಲಿ ನೀನು ಉಂಗುರವನ್ನು ಇಟ್ಟ ಸ್ಥಳವನ್ನು ಗುರುತು ಮಾಡಿಕೊಳ್ಳಬಾರದೇ?'' ಎಂದು ಹೇಳಿದನು. ``ಹೌದು, ಒಂದು ಗುರುತು ಮಾಡಿಕೊಂಡಿದ್ದೆ. ಏನೆಂದರೆ ಆಕಾಶದಲ್ಲಿ ಒಂದು ಬಿಳಿಯ ಮೋಡವು ತೇಲುತ್ತಾ ಮುಂದೆ ಹೋಗುತ್ತಿತ್ತು. ಅದರ ನೆರಳಿನ ಬುಡದಲ್ಲಿ ಉಂಗುರವನ್ನು ಇರಿಸಿದ್ದೆ'' ಎಂದನು. ಬೀರಬಲ್ಲನು ಆ ಮೂರ್ಖನ ಹೆಸರು ವಿಳಾಸವನ್ನು ಬರೆದುಕೊಂಡನು.

ಮಾರನೆಯ ದಿನ ಬೀರಬಲ್ಲನು ಆ ನಾಲ್ಕು ಜನರನ್ನು ತನ್ನೊಡನೆ ಕರೆದುಕೊಂಡು ಬಾದಶಹನ ಆಸ್ಥಾನಕ್ಕೆ ಬಂದನು. ಬೀರಬಲ್ಲನು ``ಮಹಾಪ್ರಭು ನಿನ್ನೆ ದಿನ ನೀವು ಹೇಳಿದಂತೆ ಮೂರ್ಖರನ್ನು ಕರೆತಂದಿದ್ದೇನೆ. ಈಗ ಇವರ ಪರಿಚಯ ಮಾಡಿಕೊಡುತ್ತೇನೆ'' ಎಂದು ಹೇಳಿ ಅವರ ಪರಿಚಯ ಮತ್ತು ಸಂದರ್ಭಗಳನ್ನು ಸ್ವಾರಸ್ಯವಾಗಿ ವಿವರಿಸಿದನು. ಬಾದಶಹ ಮನಸಾರೆ ನಕ್ಕು ಬೀರಬಲ್ಲನಿಗೆ ಹೇಳಿದನು. ``ಅದು ಸರಿ, ನಾನು ನಿನಗೆ ಆರು ಜನ ಮೂರ್ಖರನ್ನು ಕರೆತರಲು ಹೇಳಿದ್ದೆ. ನೀನು ನಾಲ್ಕೇ ಜನರನ್ನು ಕರೆತಂದಿರುವೆಯಲ್ಲಾ?'' ಎಂದು ಕೇಳಿದನು.



ಅದಕ್ಕೆ ಬೀರಬಲ್ಲನು "ಮಹಾಪ್ರಭು, ಇವರು ನಾಲ್ಕು ಜನರಿದ್ದಾರೆ. ಐದನೆಯವನು ನಾನೇ" ಎಂದನು. ಬಾದಶಹ "ಏನು ನೀನೇ?" ಎಂದನು. ಬೀರಬಲ್ಲನು ನಗುತ್ತ "ಹೌದು ಮಹಾಪ್ರಭು, ಈ ನಾಲ್ವರನ್ನು ಶೋಧಿಸಬೇಕಾದರೆ ನನ್ನ ಇಡೀ ದಿನ ವ್ಯರ್ಥವಾಯಿತು. ಅಷ್ಟು ಅಮೂಲ್ಯ ವೇಳೆಯನ್ನು ನಾನು ಹಾಳು ಮಾಡಿದ್ದರಿಂದ ನಾನೂ ಒಬ್ಬ ಮೂರ್ಖನಲ್ಲವೇ?"

ಬಾದಶಹ "ಆಯಿತು ಇನ್ನು ಆರನೆಯವರು" ಎಂದು ಕೇಳಿದನು. ಬೀರಬಲ್ಲನು "ಮಹಾಪ್ರಭು, ಕೋಪಿಸಿಕೊಳ್ಳಬಾರದು. ಆರನೆಯ ಮೂರ್ಖ ತಾವು. ಏಕೆಂದರೆ ಈ ಮೂರ್ಖರನ್ನು ಹುಡುಕಲು ಕಳುಹಿಸಿದವರು ನೀವೇ ಅಲ್ಲವೇ?" ಎಂದನು. ದರಬಾರಿನಲ್ಲಿದ್ದವರು ಬೀರಬಲ್ಲನ ಉದ್ಧಟತನವನ್ನು ಕಂಡು ಗುಸುಗುಸು ಮಾತನಾಡಿಕೊಳ್ಳತೊಡಗಿದರು. ಬಾದಶಹ "ಬೀರಬಲ್ಲನು ಸರಿಯಾಗಿಯೇ ಹೇಳಿದ್ದಾನೆ. ಇಂಥ ಅರ್ಥವಿಲ್ಲದ ಪ್ರಶ್ನೆ ಕೇಳಿ ನಾನು ಅವನ ಅಮೂಲ್ಯವಾದ ಸಮಯವನ್ನು ಹಾಳು ಮಾಡಿದ್ದೇನೆ. ತಪ್ಪು ನನ್ನದೇ ಆಗಿದೆ. ಆದ್ದರಿಂದ ಅವನು ನನ್ನನ್ನು ಮೂರ್ಖನೆಂದು ಪರಿಗಣಿಸಿರುವುದರಲ್ಲಿ ಯಾವ ತಪ್ಪೂ ಇಲ್ಲ" ಎಂದನು.

ಸಮಯ ಎಷ್ಟು ಮಹತ್ವದ್ದು ಎನ್ನುವುದನ್ನು ತೋರಿಸಿಕೊಟ್ಟ ಬೀರಬಲ್ಲನ ಜಾಣ್ಮೆಯನ್ನು ಹೊಗಳಿ ಬಾದಶಹ ಅವನನ್ನು ಸನ್ಮಾನಿಸಿದನು.

**- ಸಿ.ಎನ್ ಕೃಷ್ಣಮೂರ್ತಿ**

## ಚಟುವಟಿಕೆಗಳು

### ❑ ಉತ್ತರಿಸಿರಿ

- ಅಕ್ಬರ ಬಾದಶಹನ ಸಾಮರ್ಥ್ಯಗಳ ಬಗ್ಗೆ ಅನುಮಾನ ಮೂಡಲು ಕಾರಣವೇನು?
- ಅಕ್ಬರ ಬಾದಶಹನು ಬೀರಬಲ್ಲನ ಮುಂದಿಟ್ಟ ಪ್ರಶ್ನೆ ಯಾವುದು?
- ಎರಡನೇ ವ್ಯಕ್ತಿಯು ಬೀರಬಲ್ಲನಲ್ಲಿ ''ಸ್ವಾಮೀ ನನ್ನ ಕೈಗಳನ್ನು ಹಿಡಿದು ಎಳೆಯಬೇಡಿರಿ'' ಎನ್ನಲು ಕಾರಣವನೇನು?
- ಬಾದಶಹನಿಗೆ ತನ್ನ ತಪ್ಪಿನ ಅರಿವು ಹೇಗಾಯಿತು?

### ❑ ಕ್ರಮೀಕರಿಸಿ ಬರೆಯಿರಿ

- ಬೀರಬಲ್ಲನು ರಾಜಾಜ್ಞೆಯಂತೆ ಮರುದಿನ ಮೂರ್ಖರನ್ನು ಹುಡುಕಲು ಹೊರಟನು.
- ''ಸ್ವಾಮಿ, ನನ್ನ ಕೈಗಳನ್ನು ಹಿಡಿದು ಎಳೆಯಬೇಡಿರಿ, ನನ್ನ ತಲೆಗೂದಲನ್ನು ಹಿಡಿದು ಹೊರಗೆಳೆಯಿರಿ''.
- ಬೀರಬಲ್ಲನ ಎದುರುಗಡೆಯಿಂದ ಬಂದ ವ್ಯಕ್ತಿ ಬೀರಬಲ್ಲನಿಗೆ ಢಿಕ್ಕಿ ಹೊಡೆದನು.
- ''ಅಯ್ಯಾ ಮೂರ್ಖ, ನನ್ನ ಕುದುರೆ ಮುದಿಯಾಗಿದೆ. ಹೆಚ್ಚು ಭಾರವನ್ನು ಅದಕ್ಕೆ ಹೊರಲಾಗುವುದಿಲ್ಲ.''
- ಸಮಯ ಎಷ್ಟು ಮಹತ್ವದ್ದು ಎನ್ನುವುದನ್ನು ತೋರಿಸಿ ಕೊಟ್ಟ ಬೀರಬಲ್ಲನ ಜಾಣ್ಮೆಯನ್ನು ಹೊಗಳಿ ಬಾದಶಹ ಅವನನ್ನು ಸನ್ಮಾನಿಸಿದನು.
- "ನಾಳೆ ಸಂಜೆಯ ಒಳಗೆ ಐದಾರು ಜನ ಮೂರ್ಖರನ್ನು ಕರೆದು ತಂದು ತೋರಿಸು"

### ❑ ಬಿಟ್ಟಸ್ಥಳ ತುಂಬಿಸಿರಿ

ಆವರಣದಲ್ಲಿ ಕೊಡಲಾದ ಪದಗಳಲ್ಲಿ ಸೂಕ್ತವಾದವುಗಳನ್ನು ಆರಿಸಿ ಬಿಟ್ಟಸ್ಥಳದಲ್ಲಿ ತುಂಬಿಸಿರಿ.

(ಗೌರವ - ಅಗೌರವ, ಆರೋಗ್ಯ - ಅನಾರೋಗ್ಯ, ಸಮರ್ಥ - ಅಸಮರ್ಥ)

- ರಮೇಶನು ನಿರರ್ಗಳವಾಗಿ ಮಾತನಾಡಲು ............ ನಾಗಿದ್ದನು. ಆದರೆ ಹಾಡಲು ............... ನಾಗಿದ್ದನು.

- ರಾಷ್ಟ್ರಧ್ವಜಕ್ಕೆ ....................... ತೋರಬೇಕು. ಹಿರಿಯರಿಗೆ ................................ ತೋರಬಾರದು.
- ಪದದ ಆರಂಭದಲ್ಲಿ 'ಅ' ಸೇರಿ ಉಂಟಾಗುವ ವಿರೋಧಾರ್ಥಕ ಪದಗಳನ್ನು ಸಂಗ್ರಹಿಸಿ ಬರೆಯಿರಿ.

  ಮಾದರಿ : ತೃಪ್ತಿ X ಅತೃಪ್ತಿ

## ❑ ಸಂಭಾಷಣೆ ಬರೆಯಿರಿ

ಕೆಳಗೆ ಕೊಟ್ಟಿರುವ ಬೀರಬಲ್ಲ ಮತ್ತು ಮೊದಲ ವ್ಯಕ್ತಿಯೊಂದಿಗಿನ ಮಾತುಕತೆಯನ್ನು ಗಮನಿಸಿರಿ.

ಬೀರಬಲ್ಲ : (ವ್ಯಕ್ತಿಯನ್ನು ತಡೆದು ನಿಲ್ಲಿಸಿ) ಇದೇನಯ್ಯಾ, ತಲೆಯ ಮೇಲೆ ಮೂಟೆ ಇರಿಸಿಕೊಂಡಿರುವೆ?

ವ್ಯಕ್ತಿ : ನನ್ನ ಕೈಗಳಲ್ಲಿ ಲಗಾಮು ಹಿಡಿದಿರುವುದರಿಂದ ನನ್ನ ಕೈಗಳು ಖಾಲಿ ಇಲ್ಲ.

ಬೀರಬಲ್ಲ : ಮೂಟೆಯನ್ನು ನಿನ್ನ ಹಿಂಬದಿಗೆ ಇಟ್ಟುಕೊಳ್ಳಬಹುದಿತ್ತಲ್ಲಾ? ತಲೆಯ ಮೇಲೆ ಹೊರುವುದರಿಂದ ನಿನಗಾದ ಪ್ರಯೋಜನವೇನು?

ವ್ಯಕ್ತಿ : ಅಯ್ಯಾ! ಮೂರ್ಖ, ನನ್ನ ಕುದುರೆ ಮುದಿಯಾಗಿದೆ. ಹೆಚ್ಚು ಭಾರವನ್ನು ಅದಕ್ಕೆ ಹೊರಲಾಗುವುದಿಲ್ಲ. ಹೀಗಿರುವಾಗ ಮೂಟೆಯನ್ನು ಅದರ ಬೆನ್ನ ಮೇಲಿರಿಸಿದರೆ ಅದು ಪ್ರಾಣ ಬಿಡುತ್ತದೆ. ಅರ್ಥವಾಯಿತೇ?

ಬೀರಬಲ್ಲ : ಅರ್ಥವಾಯಿತು ಸ್ವಾಮಿ.

ಇದೇ ಮಾದರಿಯಲ್ಲಿ ಬೀರಬಲ್ಲ ಮತ್ತು ಉಳಿದ ಇಬ್ಬರು ವ್ಯಕ್ತಿಗಳ ನಡುವೆ ನಡೆದ ಮಾತುಕತೆಯನ್ನು ಬರೆಯಿರಿ.

## ❐ ಶೀರ್ಷಿಕೆ ನೀಡಿರಿ

'ಸಮಯದ ಮಹತ್ವ' ಕಥೆಗೆ ಸೂಕ್ತವಾದ ಬೇರೆ ಶೀರ್ಷಿಕೆಗಳನ್ನು ನೀಡಿ ಸಮರ್ಥಿಸಿರಿ.

## ❐ ವಿಂಗಡಿಸಿ ಬರೆಯಿರಿ.

ಕೆಳಗೆ ನೀಡಿರುವ ಪದಗಳನ್ನು ಮಾದರಿಯಂತೆ ವಿಂಗಡಿಸಿ ಬರೆಯಿರಿ.

ರಾಜಾಜ್ಞೆ = ರಾಜ + ಆಜ್ಞೆ

ತಲೆಗೂದಲು =

ವ್ಯರ್ಥವಾಯಿತು =

ಸಮಯವನ್ನು =

ಎದುರುಗಡೆ =

## ❐ ಭಾಷಣ ಬರೆಯಿರಿ

'ಸಮಯದ ಮಹತ್ವ'ದ ಬಗ್ಗೆ ಭಾಷಣವೊಂದನ್ನು ಬರೆದು ತರಗತಿಯ ಸಾಹಿತ್ಯ ಸಭೆಯಲ್ಲಿ ಮಂಡಿಸಿರಿ.

# ನಮ್ಮ ಬಲ



ಕಾಶ್ಮೀರದ ಕಣಿವೆಯಲ್ಲಿ
ಹಗೆಯ ಕೆಂಗಿಡಿ!
ಸಿಡಿದರೆಮಗೆ ಭಯವೆ?ನಮ್ಮ
ಬಲವು ನೂರ್ಮಡಿ!

ಯಾವ ಕಾರ್ಯ ಕ್ಷೇತ್ರವಿರಲಿ
ಪ್ರಗತಿ ಹೆಚ್ಚಲಿ!
ನಮ್ಮ ದುಡಿತ ಮಿಡಿತಗಳಿಗೆ
ದೈವ ಮೆಚ್ಚಲಿ!

ರೈತ ಕಸುಬುಗಾರ ಕೂಲಿ
ಸಮರು ಸಮರಕೆ!
ದುಡಿದು ಪಡೆಯಲಂಜಲೇಕೆ
ಹಗೆಯ ತಿಮಿರಕೆ!

ಕೋವಿ ಹಿಡಿದು ಸಮರಗೈವ
ನಮ್ಮ ಸೈನಿಕ!
ವೀರ ಕಹಳೆಯೂದಲಿಂದು
ನಮ್ಮ ವೈಣಿಕ!

ರಣದ ರಂಗ ರಂಗುಗೊಳಲು
ಭದ್ರ ಹಿಂಬದಿ!
ರಚಿಸಿ ಛಲವ ಗೆಲುವವರೆಗೆ
ಎಲ್ಲಿ ನೆಮ್ಮದಿ

ಕಾಶ್ಮೀರದ ಕಣಿವೆಯಲ್ಲಿ
ಹಗೆಯ ಕೆಂಗಿಡಿ!
ಸಿಡಿದರೆಮಗೆ ಭಯವೆ?ನಮ್ಮ
ಬಲವು ನೂರ್ಮಡಿ!

- ಬಿ.ಎ. ಸನದಿ

## ಕವಿ ಪರಿಚಯ



ಬಿ.ಎ. ಸನದಿ ಎಂಬ ಹೆಸರಿನಿಂದ ಪ್ರಸಿದ್ಧರಾದ ಬಾಬಾ ಸಾಹೇಬ ಅಹಮ್ಮದ್ ಸಾಹೇಬ ಸನದಿಯವರು ಬೆಳಗಾವಿ ಜಿಲ್ಲೆಯ ಸಿಂದೊಳ್ಳಿ ಗ್ರಾಮದಲ್ಲಿ 1933ರಲ್ಲಿ ಜನಿಸಿದರು. ಅರ್ಥಶಾಸ್ತ್ರ ಹಾಗೂ ಶಿಕ್ಷಣದಲ್ಲಿ ಪದವಿ ಹೊಂದಿದ್ದ ಇವರು ಕನ್ನಡ ಮತ್ತು ಸಂಸ್ಕೃತದಲ್ಲಿ ಎಂ.ಎ. ಪದವಿ ಗಳಿಸಿದ್ದರು. ಇವರು ಮುಂಬೈ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. 'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಭಾರತ ಸರ್ಕಾರದ ಪುರಸ್ಕಾರ', 'ಶ್ರೇಷ್ಠ ಹೊರನಾಡು ಕನ್ನಡಿಗ ಪ್ರಶಸ್ತಿ'ಗಳು ಇವರಿಗೆ ಲಭಿಸಿವೆ. ಇವರ 'ಸೂರ್ಯಪಾನ' 'ಮರುಭೂಮಿ' ಮುಂತಾದ ಕವನ ಸಂಕಲನಗಳು ಪ್ರಕಟವಾಗಿವೆ. ಪ್ರಸ್ತುತ 'ನಮ್ಮ ಬಲ' ಹಾಡನ್ನು ಅವರ ಸಮಗ್ರ ಕಾವ್ಯ 'ಸೂರ್ಯಪಾನ' ದಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❒ ಹಾಡಿರಿ

ಪದ್ಯವನ್ನು ರಾಗ, ತಾಳ, ಲಯಬದ್ಧವಾಗಿ ಹಾಡಿರಿ.

### ❒ ಪ್ರಾಸ ಪದಗಳನ್ನು ಗುರುತಿಸಿರಿ.

ಈ ಪದ್ಯದಲ್ಲಿರುವ ಪ್ರಾಸಪದಗಳನ್ನು ಪಟ್ಟಿ ಮಾಡಿರಿ.

ಕೆಂಗಿಡಿ – ನೂರ್ಮಡಿ

ಹೆಚ್ಚಲಿ – ಮೆಚ್ಚಲಿ

........................

........................

........................

## ❐ ಹೋಲಿಸಿ ಬರೆಯಿರಿ

ಕೆಳಗಿನ ಪದ್ಯವನ್ನು 'ನಮ್ಮ ಬಲ' ಪದ್ಯದೊಂದಿಗೆ ಹೋಲಿಸಿ ಸಾಮ್ಯ-ವ್ಯತ್ಯಾಸಗಳನ್ನು ಬರೆಯಿರಿ.

### ಭರತಭೂಮಿ ನನ್ನ ತಾಯಿ

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು ||ಪ ||

ತುಹಿನ ಗಿರಿಯ ಸಿರಿಯ ಮುಡಿಯ
ಹಿರಿಯ ಕಡಲು ತೊಳೆಯುವಡಿಯ
ಪೈರು ಪಚ್ಚೆ ಪಸುರಿನುಡೆಯ || ಅ.ಪ ||

ಸಿಂಧು ಯಮುನೆ ದೇವ ಗಂಗೆ
ತಪತಿ ಕೃಷ್ಣೆ ಭದ್ರೆ ತುಂಗೆ
ಸಲಿಲ ತೀರ್ಥ ಪುಣ್ಯ ರಂಗೆ || 1 ||

ಮತದ ಬಿರುಕುಗಳನು ತೊರೆವೆ
ನುಡಿಗಳೊಡಕುಗಳನು ಮರೆವೆ
ತೊತ್ತ ತೊಡಕುಗಳನು ಬಿರಿವೆ
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು
ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಿಲು || 2 ||

- ಕುವೆಂಪು

## ❑ ಆಶಯ ಬರೆಯಿರಿ.

'ನಮ್ಮ ಬಲ' ಪದ್ಯದ ಆಶಯ ಬರೆಯಿರಿ.

## ❑ ಪತ್ರಿಕಾ ವರದಿ ತಯಾರಿಸಿರಿ

2021 ರಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾ ಕೂಟದಲ್ಲಿ ಜಾವೆಲಿನ್ ಎಸೆತದಲ್ಲಿ ಚಿನ್ನದ ಪದಕ ಪಡೆದು ನಮ್ಮ ದೇಶದ ಕೀರ್ತಿಯನ್ನು ಹೆಚ್ಚಿಸಿದ ಶ್ರೀ ನೀರಜ್ ಚೋಪ್ರ ಅವರ ಕುರಿತು ಕೆಲವು ಮಾಹಿತಿಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಉಪಯೋಗಿಸಿಕೊಂಡು ಒಂದು ಪತ್ರಿಕಾ ವರದಿಯನ್ನು ತಯಾರಿಸಿರಿ.

ಜನನ : 24.12.1997

ಜನ್ಮಸ್ಥಳ : ಹರಿಯಾಣ ರಾಜ್ಯದ ಪಾಣಿಪತ್

ಸಾಧನೆಗಳು : 2016 ರಲ್ಲಿ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ, 2018 ರಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ, 2021 ರಲ್ಲಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ.

## ❑ ಸಂಗ್ರಹಿಸಿರಿ

ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಸಂಚಿಕೆಯೊಂದನ್ನು ತಯಾರಿಸಿ ಅದಕ್ಕೆ ಸೂಕ್ತ ಶೀರ್ಷಿಕೆ ನೀಡಿರಿ.

# ರಾಣಿ ಚೆನ್ನಮ್ಮ

(ಹಿನ್ನೆಲೆ: ಕನ್ನಡನಾಡಿನ ಪುಟ್ಟ ಸಂಸ್ಥಾನ ಕಿತ್ತೂರು. 1782ರಲ್ಲಿ ಮಲ್ಲಸರ್ಜ ದೇಸಾಯಿ ಕಿತ್ತೂರಿನ ದೊರೆಯಾಗುತ್ತಾನೆ. ಈತನಿಗೆ ಇಬ್ಬರು ಪತ್ನಿಯರು. ರುದ್ರಮ್ಮ ಮತ್ತು ಚೆನ್ನಮ್ಮ. ದೊರೆಯ ಮರಣಾನಂತರ ಈತನ ಹಿರಿಯ ರಾಣಿಯ ಪುತ್ರ ಶಿವಲಿಂಗರುದ್ರ ಸರ್ಜನು ಸಿಂಹಾಸನವನ್ನೇರುತ್ತಾನೆ. ಶಿವಲಿಂಗರುದ್ರ ಅಸಮರ್ಥ ಆಡಳಿತಗಾರನಾದುದರಿಂದ ರಾಣಿ ಚೆನ್ನಮ್ಮಳೇ ರಾಜ್ಯದ ಹೊಣೆ ಕೈಗೆತ್ತಿಕೊಳ್ಳಬೇಕಾಗುತ್ತದೆ. ದೊರೆಗೆ ಮಕ್ಕಳಿಲ್ಲದಿದ್ದುದರಿಂದ ದೂರದ ಸಂಬಂಧಿ ಬಾಲಕನನ್ನು ಸವಾಯಿ ಮಲ್ಲಸರ್ಜನೆಂಬ ಹೆಸರಿನೊಂದಿಗೆ ಯುವರಾಜನನ್ನಾಗಿ ದತ್ತು ಸ್ವೀಕಾರ ಮಾಡಲಾಗುತ್ತದೆ. ಈ ರೀತಿ ದತ್ತು ಸ್ವೀಕಾರಕ್ಕೆ ಬ್ರಿಟಿಷರ ಅನುಮತಿ ಇರುವುದಿಲ್ಲ.ಈ ಬಗ್ಗೆ ವಿಚಾರಿಸಲು ಬ್ರಿಟಿಷ್ ಅಧಿಕಾರಿ ಕಿತ್ತೂರಿನ ರಾಣಿ ಚೆನ್ನಮ್ಮಳ ಆಸ್ಥಾನಕ್ಕೆ ಬರುವನು.)

ದೂತ : ಪ್ರಧಾನಿಗಳಿಗೆ ವಂದನೆಗಳು

ಪ್ರಧಾನಿ : ಏನು ಸಂದೇಶವಿದೆ?



ದೂತ : ಬ್ರಿಟಿಷ್ ಅಧಿಕಾರಿ ಥ್ಯಾಕರೆ ಸಾಹೇಬರು ಮಹಾರಾಣಿಯನ್ನು ಭೇಟಿಯಾಗಲು ಕಾಯುತ್ತಿದ್ದಾರೆ.

ಪ್ರಧಾನಿ : ಒಳಗೆ ಕಳುಹಿಸು.

(ಥ್ಯಾಕರೆ ದರ್ಪದಿಂದಲೇ ಆಸ್ಥಾನಕ್ಕೆ ಆಗಮಿಸುವನು.)

ಪ್ರಧಾನಿ : ಥ್ಯಾಕರೆ ಸಾಹೇಬರಿಗೆ ಪ್ರಣಾಮಗಳು. ದಯವಿಟ್ಟು ಹೀಗೆ ಬಂದು ಆಸನ ಸ್ವೀಕರಿಸಬೇಕು. ತಣ್ಣಗೆ ಪಾನೀಯ ಸೇವಿಸಿ, ವಿಶ್ರಮಿಸುವಿರಂತೆ.

ಥ್ಯಾಕರೆ : ಕಿತ್ತೂರಿನವರು ಅತಿಥಿ ಸತ್ಕಾರಕ್ಕೆ ಹೆಸರಾದವರೆಂದು ನಮಗೆ ಗೊತ್ತಿದೆ. ಈಗ ಅಷ್ಟು ವ್ಯವಧಾನವಿಲ್ಲ. ಎಲ್ಲಿ ನಿಮ್ಮ ರಾಣಿ ಅವರನ್ನು ಕರೆಸಿ. ನಾವು ಮಾತನಾಡಬೇಕು.

ಪ್ರಧಾನಿ : ನೇರವಾಗಿ ಅವರ ದರ್ಶನ ಸಾಧ್ಯವಿಲ್ಲ. ಅದೇನಿದ್ದರೂ ನಮ್ಮೊಡನೆ ಹೇಳಬಹುದು.

ಥ್ಯಾಕರೆ : ನಾವು ಆಂಗ್ಲರೇ ಇಲ್ಲಿ ಪರಮಾಧಿಕಾರಿಗಳು. ನಮ್ಮ ಅನುಮತಿಯಿಲ್ಲದೆ ಇಲ್ಲಿ ದತ್ತು ಸ್ವೀಕಾರ ಹೇಗೆ ನಡೆಯಿತು? ನೀವು ನಮಗೆ ಕಪ್ಪ ಕಾಣಿಕೆ ಸಲ್ಲಿಸಬೇಕಾಗಿದೆ. ಮರೆತುಹೋಯಿತೇನು? ಹಂ... ಏನಿದರರ್ಥ?

ಪ್ರಧಾನಿ : ಈ ಹಿಂದೆ ಒಂದು ಒಪ್ಪಂದ ನಡೆದಿತ್ತು. ಆದರೆ ನಮ್ಮ ರಾಣಿಯು ಕಿತ್ತೂರನ್ನು ಸ್ವತಂತ್ರ ರಾಜ್ಯವನ್ನಾಗಿಯೇ ಪರಿಗಣಿಸುತ್ತಾರೆ.

ಥ್ಯಾಕರೆ : (ಕೋಪದಿಂದ) ಇದರ ಪರಿಣಾಮವನ್ನು ಅರಿತಿದ್ದರೆ ಆಕೆ ಇಂಥ ದುಸ್ಸಾಹಸಕ್ಕೆ ಕೈ ಹಾಕುತ್ತಿರಲಿಲ್ಲ.

ಪ್ರಧಾನಿ : ಮಹಾರಾಣಿ ಚೆನ್ನಮ್ಮಾಜಿ ನಮ್ಮ ಅಪ್ರತಿಮ ನಾಯಕಿ, ಯಾವುದೇ ಸಣ್ಣ ವಿಚಾರವನ್ನು ಕೂಡಾ, ಅವರು ಹಗುರವಾಗಿ ಪರಿಗಣಿಸುವವರಲ್ಲ. ಇನ್ನು ನಿಮ್ಮ ವಿಚಾರ....!

ಥ್ಯಾಕರೆ : ಮಹಾಯೋಧರ ಪಡೆಯೇ ನಮ್ಮಲ್ಲಿದೆ, ನಮಗೆ ಸವಾಲು ಎಸೆಯುವುದೆಂದರೆ ಸಣ್ಣ ವಿಚಾರವಲ್ಲ.

ಪ್ರಧಾನಿ : ಇರಬಹುದು, ಆದರೆ ನಮ್ಮವರಲ್ಲಿ ದೇಶಪ್ರೇಮವಿದೆ. ನಮ್ಮ ಚೆನ್ನಮ್ಮ ರಾಣಿಯವರು ಅಸೀಮ ಸಾಹಸಿ, ಕುದುರೆ ಸವಾರಿ, ಕತ್ತಿವರಸೆ, ಬಿಲ್ವಿದ್ಯೆಯಲ್ಲಿ ಅವರನ್ನು ಸೋಲಿಸುವವರೇ ಇಲ್ಲ. ಆಕೆಯ ಶೌರ್ಯ ಪರಾಕ್ರಮದೆದುರು ನಿಲ್ಲುವವರು ಈ ಭೂಮಿ ಮೇಲೆ ಹುಟ್ಟಿಲ್ಲ.

ಥ್ಯಾಕರೆ : (ಗೊಳ್ಳನೆ ನಕ್ಕು) ತುಫಾಕಿ ಗುಂಡಿನೆದುರು ಕತ್ತಿ ಬಿಲ್ಲುಗಳು ನಿಲ್ಲುವವೇನು? ಕಿತ್ತೂರು ನೆಲಸಮ ಆಗಬಾರದೆಂದಿದ್ದರೆ, ಈಗಿಂದೀಗಲೇ ತಪ್ಪಾಯಿತೆಂದು ಒಪ್ಪಿಕೊಂಡು ಕಪ್ಪಕಾಣಿಕೆ ಸಲ್ಲಿಸಲು ಚೆನ್ನಮ್ಮಾಜಿಗೆ ಹೇಳಿರಿ.

ಪ್ರಧಾನಿ : ವೃಥಾ ಕಂಠಶೋಷಣೆಯಿಂದ ಯಾರಿಗೂ ಉಪಯೋಗವಿಲ್ಲ. ನೀವು ಏನಿದ್ದರೂ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳಿರಿ. ಯಾವುದೇ ವಿಚಾರದಲ್ಲೂ ಅವರ ತೀರ್ಮಾನವೇ ಅಂತಿಮ.

ಥ್ಯಾಕರೆ : (ಕೋಪದಿಂದ) ನಾವು ಅರಿಕೆ ಮಾಡಲು ಬಂದವರಲ್ಲ, ಆಜ್ಞೆ ಮಾಡಲು ಬಂದವರು!

(ಅಷ್ಟರಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮನವರಿಗೆ ಜಯವಾಗಲಿ ಎಂಬ ಘೋಷಣೆಯೊಂದಿಗೆ ರಾಣಿ ಪ್ರವೇಶಿಸುವಳು. ಆಕೆ ಆಸನ ಸ್ವೀಕರಿಸಿ ಮಂದಹಾಸದಿಂದಲೇ ಥ್ಯಾಕರೆಯತ್ತ ನೋಡುವಳು.)

ಥ್ಯಾಕರೆ : ಚೆನ್ನಮ್ಮ ರಾಣಿಯವರಿಗೆ ಥ್ಯಾಕರೆಯ ನಮಸ್ಕಾರಗಳು

ಚೆನ್ನಮ್ಮ : ಪ್ರತಿವಂದನೆಗಳು ಥ್ಯಾಕರೆ ಸಾಹೇಬರೇ, ನಮ್ಮ ತುರ್ತು ಭೇಟಿಗಾಗಿ ಕಾದಿರುವ ವಿಚಾರ ತಿಳಿಯಿತು. ಬಂದ ಕಾರಣ ತಿಳಿಸೋಣವಾಗಲಿ.

ಥ್ಯಾಕರೆ : ನೀವು ನಮ್ಮ ಮಾಂಡಲೀಕರು ಎಂಬುದನ್ನು ನೆನಪಿಸಲು ಬಂದೆವು. ನಮ್ಮ ಒಪ್ಪಿಗೆಯಿಲ್ಲದೆ ನಡೆದ ದತ್ತು ಸ್ವೀಕಾರ ಊರ್ಜಿತವಲ್ಲ ಎಂದು ತಿಳಿಸಿ ಹೋಗಲು ಬಂದೆವು.

ಚೆನ್ನಮ್ಮ : ತಿಳಿಸಿದ್ದಾಯಿತಲ್ಲ. ಇನ್ನು ದಯಮಾಡಿಸಿ.

ಥ್ಯಾಕರೆ : ಈ ಉದ್ಧಟತನದ ಪರಿಣಾಮ ಏನೆಂದು ನಿಮಗೆ ತಿಳಿದಿದೆಯೇ?

ಚೆನ್ನಮ್ಮ : ಆಜ್ಞೆ ಮಾಡಲು ನೀವು ಯಾರು? ಅತಿಥಿಯಾಗಿ ಬಂದವರು ಅಧಿಕಾರದಾಹಿಗಳಾದಿರಿ. ನಮ್ಮಲ್ಲೇ ಜಗಳ ಹುಟ್ಟಿಸಿ, ಲಾಭ ಪಡೆದಿರಿ. ಇದು ನಮ್ಮ ಮಾತೃಭೂಮಿ. ಇಲ್ಲಿ ಬಾಳಿ ಬದುಕುವುದು ನಮ್ಮ ಹಕ್ಕು. ನಾವಿಲ್ಲಿ ಸರ್ವ ಸ್ವತಂತ್ರರು. ಮತ್ತೆ ನಿಮಗೇಕೆ ನಾವು ಕಪ್ಪಕಾಣಿಕೆ ಸಲ್ಲಿಸಬೇಕು? ನೀವೇನು ನಮ್ಮ ದಾಯಾದಿಗಳೇ? ಒಂದು ಕಾಸೂ ಕೊಡಲಾರೆವು. ಹೋಗಿ ನಿಮ್ಮ ವೈಸರಾಯಿಗೆ ಹೇಳಿಕೊಳ್ಳಿರಿ.

ಥ್ಯಾಕರೆ : ಇದೇ ನಿಮ್ಮ ಕೊನೆಯ ಮಾತೇ?

ಚೆನ್ನಮ್ಮ : ಹೌದು, ಆ ಸೂರ್ಯ ಚಂದ್ರರ ಸಾಕ್ಷಿಯಾಗಿಯೂ ಇದೇ ನಮ್ಮ ಕೊನೆಯ ಮಾತು.

ಥ್ಯಾಕರೆ : ಮತ್ತೊಮ್ಮೆ ಯೋಚಿಸಿರಿ. ನಮ್ಮ ಮಾತಿನಂತೆ ನಡೆದುಕೊಳ್ಳುವುದೇ ಆದರೆ ಕೂದಲೆಳೆಯೂ ಕೊಂಕದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು. ಸಾಮಂತರಾಗಿ ಕಪ್ಪಕಾಣಿಕೆ ನೀಡುತ್ತಾ ನಿಶ್ಚಿಂತೆಯಿಂದ ರಾಜ್ಯಭಾರ ಮಾಡಬಹುದು.

ಚೆನ್ನಮ್ಮ : (ದೃಢನಿರ್ಧಾರದಿಂದ) ಕಿತ್ತೂರು ಒಂದು ಸ್ವತಂತ್ರ ಸಂಸ್ಥಾನ, ಅಂದು, ಇಂದು, ಎಂದೆಂದೂ....! ಇದು ಸತ್ಯ. ಗುಲಾಮಗಿರಿಗಿಂತ ವೀರಸ್ವರ್ಗವೇ ಮೇಲೆಂದು ತಿಳಿದವರು ನಾವು. ಮಾತು ಸಾಕು. ಅತಿಥಿಗಳ ಮೇಲೆ ಕೈ ಮಾಡುವ ಬರ್ಬರರು ನಾವಲ್ಲ. ಈಗ ಜೀವದಾನ ಮಾಡಿದ್ದೇವೆ. ಹೋಗಿ ಬದುಕಿಕೊಳ್ಳಿರಿ.

ಥ್ಯಾಕರೆ : ನಿಮ್ಮ ಅಹಂಕಾರಕ್ಕೆ ತಕ್ಕ ಶಾಸ್ತಿ ಮಾಡದಿದ್ದರೆ ನಾನು ಥ್ಯಾಕರೆ ಸಾಹೇಬನೇ ಅಲ್ಲ...!

ಚೆನ್ನಮ್ಮ : ಮೊದಲು ಜೀವ ಉಳಿಸಿಕೊಳ್ಳುವ ದಾರಿ ನೋಡಿರಿ....! ಆಮೇಲೆ ಬದುಕಿ ಉಳಿದರೆ ಪೌರುಷದ ಮಾತು.

(ರಾಣಿ ಚೆನ್ನಮ್ಮನವರಿಗೆ ಜಯವಾಗಲಿ ಎಂಬ ಘೋಷ ಕೇಳಿಸುವುದು. ಥ್ಯಾಕರೆ ನಿರ್ಗಮಿಸುವನು.)

**- ಲೀಲಾ ಮಣ್ಣಾಲ**

## ಲೇಖಕರ ಪರಿಚಯ



ಲೇಖಕಿ ಲೀಲಾ ಮಣ್ಣಾಲ ಇವರು 1953 ಜೂನ್ 20ರಂದು ಪುತ್ತೂರಿನ ಮಣ್ಣಾಲದಲ್ಲಿ ಜನಿಸಿದರು. ತಂದೆ ಗಿಳಿಯಾಲ ಕೃಷ್ಣ ಭಟ್, ತಾಯಿ ಪಾರ್ವತಿ. ಹೊಣೆ ಮತ್ತು ಇತರ ಕಥೆಗಳು, ತೆರೆ, ಮುಸ್ಸಂಜೆಯ ಹಕ್ಕಿಗಳು, ಮತ್ತೆ ಬಂದಿದೆ ಯುಗಾದಿ ಇವರ ಕಥಾ ಸಂಕಲನಗಳಾಗಿವೆ. ವಿಭಿನ್ನರು ಮತ್ತು ಅನಾವರಣ, ನಿಮ್ನ ನಿನಾದ, ಕೆಂಪು ಚಿನ್ನ ಇವರ ಕಾದಂಬರಿಗಳಾಗಿವೆ. ನವರಸಾಭಿನಯ ರಸವರ್ಷ, ಭಾವರಸಧಾರೆ ಇವರು ಬರೆದ ನಾಟಕಗಳಾಗಿವೆ. ಪಿಂಕಿಯ ಪ್ರಪಂಚ, ಬಾ ಕಂದ ಹಾಡೋಣ, ಪುಣ್ಯಕೋಟಿ, ಜೀಮೂತವಾಹನ ಮುಂತಾದವು ಬಾಲ ಸಾಹಿತ್ಯ ಕೃತಿಗಳಾಗಿವೆ. ನಿರಂತರ ಸತ್ಯ – ಬಾಪೂ ಬದುಕಿನ ಸ್ವಾರಸ್ಯಗಳು, ಮಹರ್ಷಿ ದಯಾನಂದ ಸರಸ್ವತಿ ಬದುಕು ಮತ್ತು ವಿಚಾರಧಾರೆ ಮುಂತಾದ ಜೀವನ ಚಿತ್ರಣಗಳನ್ನು ಪ್ರಕಟಿಸಿದ್ದಾರೆ.

'ರಾಣಿ ಚೆನ್ನಮ್ಮ' ನಾಟಕವನ್ನು ಇವರ 'ಭಾವರಸಧಾರೆ' ಪುಸ್ತಕದಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ❒ ಅಭಿನಯಿಸಿರಿ

ರಾಣಿ ಚೆನ್ನಮ್ಮ ನಾಟಕವನ್ನು ಅಭಿನಯಿಸಿರಿ.

### ❒ ಪಾತ್ರಚಿತ್ರಣ ಬರೆಯಿರಿ

ಈ ನಾಟಕದಲ್ಲಿ ಬಂದಿರುವ ಕಿತ್ತೂರರಾಣಿ ಚೆನ್ನಮ್ಮನ ಪಾತ್ರಚಿತ್ರಣವನ್ನು ಬರೆಯಿರಿ.

### ❒ ಬದಲಾಯಿಸಿ ಬರೆಯಿರಿ

ರಾಣಿ ಚೆನ್ನಮ್ಮ ನಾಟಕವನ್ನು ಕಥಾ ರೂಪಕ್ಕೆ ಬದಲಾಯಿಸಿ ಬರೆಯಿರಿ.

### ❒ ಜೋಡುನುಡಿ ಗುರುತಿಸಿರಿ

ಪಾಠಭಾಗದಲ್ಲಿ ಬಂದಿರುವ ಜೋಡುನುಡಿಗಳನ್ನು ಕೆಳಗೆ ಕೊಡಲಾಗಿದೆ. ಇಂತಹ ಇತರ ಜೋಡುನುಡಿಗಳನ್ನು ಸಂಗ್ರಹಿಸಿ ಬರೆಯಿರಿ.

- ಕಷ್ಟ ಕಾರ್ಪಣ್ಯ
- ಕಪ್ಪ ಕಾಣಿಕೆ

## ❑ ಪದಜೋಡಣೆ ಮಾಡಿರಿ

ಅದಲು ಬದಲು ಮಾಡಿದ ಅಕ್ಷರಗಳನ್ನು ಉಪಯೋಗಿಸಿ ಪದಜೋಡಣೆ ಮಾಡಿರಿ.

| | | | | | |
|---|---|---|---|---|---|
| ಚೆ | ರಾ | ಮ್ಮ | ಣಿ | ನ್ನ | |
| ರೆ | ಥ್ಯಾ | ಕ | | | |
| ಶ | ಪ್ರೇ | ದೇ | ಮ | | |
| ನಿ | ಪ್ರ | ಧಾ | | | |
| ತ್ತೂ | ಕಿ | ರು | | | |

## ❑ ಪತ್ರ ಬರೆಯಿರಿ

"ಕಿತ್ತೂರು ಒಂದು ಸ್ವತಂತ್ರ ಸಂಸ್ಥಾನ, ಗುಲಾಮಗಿರಿಗಿಂತ ವೀರಸ್ವರ್ಗವೇ ಮೇಲೆಂದು ತಿಳಿದವರು ನಾವು." ರಾಣಿ ಚೆನ್ನಮ್ಮ ನಾಟಕ ಮತ್ತು ಈ ಮಾತುಗಳ ಹಿನ್ನೆಲೆಯಲ್ಲಿ ಚೆನ್ನಮ್ಮಳ ರಾಷ್ಟ್ರಪ್ರೇಮವನ್ನು ವಿಶ್ಲೇಷಿಸುತ್ತಾ ಗೆಳೆಯನಿಗೊಂದು ಪತ್ರ ಬರೆಯಿರಿ.

## ❑ ಪ್ರಬಂಧ ಬರೆಯಿರಿ

ಕಿತ್ತೂರು ರಾಣಿ ಚೆನ್ನಮ್ಮಳಂತೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಣಿ ಅಬ್ಬಕ್ಕಳ ಕುರಿತು ಮಾಹಿತಿ ಸಂಗ್ರಹಿಸಿ ಪ್ರಬಂಧ ಬರೆಯಿರಿ.

# 3. ನಾವು ಮನುಜರು





ಸಮಾಜದಲ್ಲಿನ ಅಸಮಾನತೆಯ ಕಾರಣದಿಂದಾಗಿ ಅಲ್ಲಿ ಒಂದು ಸಂಘರ್ಷ ನಡೆಯುತ್ತಿದೆ. ಸಮಾಜದಲ್ಲಿ ಹಿಂದೆ ನೆಲೆನಿಂತಿದ್ದ ಸಾಮಾಜಿಕ ಅಸಮಾನತೆಗಳ ಬಗ್ಗೆ ನಿಮಗೆ ತಿಳಿದಿದೆಯೇ? ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಟಿಪ್ಪಣಿ ಬರೆಯಿರಿ.

# ಬಿ.ಆರ್. ಅಂಬೇಡ್ಕರ್



ಅಂಬೇಡ್ಕರರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬವಾಡೆ ಎಂಬ ಗ್ರಾಮದಲ್ಲಿ 1891ನೆಯ ಇಸವಿ ಎಪ್ರಿಲ್ 14ರಂದು ಜನಿಸಿದರು. ಭೀಮರಾವ್ ಅಂಬವಾಡೇಕರ್ ಎಂಬುದು ಅವರ ಮೊದಲ ಹೆಸರು. ಅವರ ತಂದೆ ರಾಮ್ ಜಿ ಸಕ್‌ಪಾಲ್, ತಾಯಿ ಭೀಮಾ ಬಾಯಿ.

ಶಾಲೆಯಲ್ಲಿರುವಾಗಲೇ ಅವರಿಗೆ ಅಸ್ಪೃಶ್ಯತೆಯ ಬಿಸಿ ತಗುಲಿತು. ಶಾಲೆಯಲ್ಲಿ ಅವರು ಇತರ ವಿದ್ಯಾರ್ಥಿಗಳ ಜೊತೆ ಕುಳಿತುಕೊಳ್ಳುವಂತಿರಲಿಲ್ಲ. ಕುಡಿಯುವ ನೀರನ್ನು ಯಾರಾದರೂ ಮೇಲಿಂದ ಸುರಿದರೆ ಬೊಗಸೆಯೊಡ್ಡಿ ಕುಡಿಯಬೇಕಾಗಿತ್ತು. ಇದೆಲ್ಲ ಏಕೆ ಎಂಬುದು ಆ ಬಾಲಕನಿಗೆ ಅರ್ಥವೇ ಆಗುತ್ತಿರಲಿಲ್ಲ. ಸಮಾಜಕ್ಕೆ ಅಂಟಿರುವ ಈ ಅಸ್ಪೃಶ್ಯತೆಯ ಕೊಳೆಯನ್ನು ತೊಳೆಯಬೇಕು ಎಂದು ಆತ ಆಗಲೇ ತೀರ್ಮಾನಿಸಿದ್ದನು.

ಭೀಮ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಉಪಾಧ್ಯಾಯರೊಬ್ಬರು ಹುಡುಗನ ಚುರುಕು ಬುದ್ಧಿಯನ್ನು ಮೆಚ್ಚಿಕೊಂಡಿದ್ದರು. ಅವರ ಮನೆತನದ ಹೆಸರು ಅಂಬೇಡ್ಕರ್. ಭೀಮನ ಮೇಲೆ ಅವರ ಪ್ರೀತಿ ಎಷ್ಟಿತ್ತೆಂದರೆ ಅವರು ಭೀಮನ ಹೆಸರಿನ ಅಂಬವಾಡೇಕರ್ ಎಂದಿದ್ದನ್ನು ಅಂಬೇಡ್ಕರ್ ಎಂದು ಮಾರ್ಪಡಿಸಿಬಿಟ್ಟರು. ಭೀಮಾಬಾಯಿಯ ಮರಣದ ನಂತರ ಭೀಮನ ತಂದೆ ಎರಡನೆಯ ಮದುವೆಯಾದರು. ಆ ಬಳಿಕ ಅವನ ಮನಸ್ಸೇ ಬದಲಾಗಿ ಹೋಯಿತು. "ತಾನು ಸ್ವತಂತ್ರವಾಗಿ ಬಾಳಬೇಕು. ಅದಕ್ಕೆ ಇರುವ ಒಂದೇ ಮಾರ್ಗ ಚೆನ್ನಾಗಿ ಓದುವುದು" ಎಂದು ಹುಡುಗ ತೀರ್ಮಾನಿಸಿದ. ಅಂಬೇಡ್ಕರ್ ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು

ತಮ್ಮ ಹದಿನೇಳನೇ ವಯಸ್ಸಿನಲ್ಲಿ ತೇರ್ಗಡೆ ಹೊಂದಿದರು. ಆ ವರ್ಷವೇ ಅವರ ವಿವಾಹವು ರಮಾಬಾಯಿಯವರೊಂದಿಗೆ ನಡೆಯಿತು. ಅವರು ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಯನ್ನು ಮುಗಿಸಿದರು. 1912ರಲ್ಲಿ ಅವರು ಬಿ.ಎ. ಪದವೀಧರರಾದರು. 1913ರಲ್ಲಿ ಅಂಬೇಡ್ಕರರ ತಂದೆಯವರು ಮೃತರಾದಾಗ ಅವರು ಬರೋಡದ ಮಹಾರಾಜರ ಬಳಿ ಕೆಲಸದಲ್ಲಿದ್ದರು. ಬರೋಡ ಮಹಾರಾಜರು ಭೀಮರಾವ್ ಅಂಬೇಡ್ಕರನ್ನು ಉನ್ನತ ಶಿಕ್ಷಣ ಪಡೆಯಲು ಅಮೇರಿಕಾಕ್ಕೆ ಕಳುಹಿಸಿದರು. ಅಮೇರಿಕಾದಲ್ಲಿ ಅವರಿಗೆ ಹೊಸ ಜೀವನದ ಅನುಭವವಾಯಿತು. ಅಲ್ಲಿ ಅಸ್ಪೃಶ್ಯತೆಯ ಪಿಡುಗು ಇರಲಿಲ್ಲ. ಅಮೇರಿಕಾದಲ್ಲಿ ಪ್ರೌಢ ಪ್ರಬಂಧಗಳನ್ನು ಬರೆದು ಎಂ.ಎ ಪದವಿಯನ್ನೂ ಪಿ.ಹೆಚ್.ಡಿ ಪದವಿಯನ್ನೂ ಗಳಿಸಿ ಅವರು ಭಾರತಕ್ಕೆ ಹಿಂತಿರುಗಿದರು.

ಭಾರತದಲ್ಲಿ ಕಾಲಿಟ್ಟುದೇ ತಡ, ಅಸ್ಪೃಶ್ಯತೆಯ ಬಿಸಿ ಮತ್ತೆ ಅವರನ್ನು ತಟ್ಟಿತು. ದೊಡ್ಡ ಅಧಿಕಾರಿಯಾದರೂ ಕಛೇರಿಯಲ್ಲಿದ್ದಾಗ ಜವಾನ ಕೂಡಾ ಅವರ ಕೈಗೆ ಫೈಲುಗಳನ್ನು ಕೊಡದೆ ದೂರದಿಂದ ಎಸೆಯುತ್ತಿದ್ದನು. ಅಸ್ಪೃಶ್ಯತೆಯ ಅಪಮಾನವನ್ನು ಸ್ವತಃ ಅನುಭವಿಸಿದ್ದ ಅಂಬೇಡ್ಕರರ ದೃಷ್ಟಿಯಲ್ಲಿ 'ಅಸ್ಪೃಶ್ಯರ ಉದ್ಧಾರ ಇತರರಿಂದ ಸಾಧ್ಯವಿಲ್ಲ. ನ್ಯಾಯ ಇತರರಿಂದ ದೊರೆಯದು. ಅನ್ಯಾಯಕ್ಕೆ ಸಿಕ್ಕವರೇ ನ್ಯಾಯವನ್ನು ಪಡೆಯಬೇಕು' ಎಂದಾಗಿತ್ತು. "ಶತಮಾನಗಳಿಂದ ತಮ್ಮತನವನ್ನು ಕಳೆದುಕೊಂಡ ಅಸ್ಪೃಶ್ಯರನ್ನು ಭಾಷಣಗಳಿಂದ ಬಡಿದೆಬ್ಬಿಸಲು ಸಾಧ್ಯವಿಲ್ಲ" ಎಂದು ಅವರಿಗೆ ತಿಳಿದಿತ್ತು. ಅವರು ಸಮಾಜದ ಮೂಢನಂಬಿಕೆಗಳ ವಿರುದ್ಧ ಬಂಡಾಯ ಏಳಲು ತೀರ್ಮಾನಿಸಿದರು. ಇದರ ಪರಿಣಾಮವಾಗಿ ನಡೆದದ್ದು 'ಚೌದರ್ ಕೆರೆ' ಸತ್ಯಾಗ್ರಹ.

ಕೊಲಾಬ ಜಿಲ್ಲೆಯ ಮಹದ್ ಪುರಸಭೆಯ ಚೌದರ್ ಕೆರೆಯ ನೀರನ್ನು ಅಸ್ಪೃಶ್ಯರಿಗೆ ಬಳಸಲು ಅನುಮತಿ ನೀಡಿದ್ದರೂ ಅದು ಆಚರಣೆಗೆ ಬಂದಿರಲಿಲ್ಲ. ಈ ಕೆರೆಯ ನೀರನ್ನು ಬಳಸಿ ಸಮಾನತೆಯ ಧ್ವಜವನ್ನು ಹಾರಿಸಲು ಅಂಬೇಡ್ಕರರು ತೀರ್ಮಾನಿಸಿದರು. ನಿಶ್ಚಯಿಸಿದ ದಿನದಂದು ಅಂಬೇಡ್ಕರರೇ ಮೊದಲು ಕೆರೆಯ ನೀರನ್ನು ಮುಟ್ಟಿದರು. ಅನೇಕರು ನೀರನ್ನು ಕುಡಿದರು. ಆ ವರೆಗೆ ಕೆರೆಯ ಹತ್ತಿರ ಸುಳಿಯಲೂ ಅವಕಾಶವಿಲ್ಲದ ಕಡೆ "ದೇವರು ಸೃಷ್ಟಿಸಿದ ನೀರು ದೇವರ ಮಕ್ಕಳಾದ ಎಲ್ಲರಿಗೂ ಸೇರಿದ್ದು" ಎಂದು ಸಾಧಿಸಿದರು. ಈ ಘಟನೆ ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ

ತೆರೆಯಿತು. ಅಂಬೇಡ್ಕರರ ಇಡೀ ಜೀವನ ಅಸ್ಪೃಶ್ಯರೆನ್ನಿಸಿಕೊಂಡವರಿಗೆ ನ್ಯಾಯವನ್ನು, ಸಮಾನತೆಯನ್ನು ದೊರಕಿಸಿ ಕೊಡುವುದಕ್ಕೆ ಮುಡಿಪಾಯಿತು. "ಅಸ್ಪೃಶ್ಯರ ಹಿತವನ್ನು ಸಾಧಿಸುವವರೆಗೆ ದೇವರು ನಮ್ಮನ್ನು ಉಳಿಸಿರುವನು" ಎಂದು ಎಷ್ಟೋ ಬಾರಿ ಅವರು ಹೇಳಿದ್ದರು. ಭಾರತದಲ್ಲಿ 'ಅಸ್ಪೃಶ್ಯತೆ ಅಪರಾಧ' ಎಂಬ ಕಾನೂನು ಜ್ಯಾರಿಗೆ ಬರುವುದಕ್ಕೆ ಅವರು ಸಾಕ್ಷಿಯಾದರು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ ವಿಶಾಲವಾದ ದೇಶದ ಆಡಳಿತ ನಡೆಸಲು ಅಗತ್ಯವಾದ ನಿಯಮಗಳನ್ನು ರಚಿಸಬೇಕಿತ್ತು. ಈ ನಿಯಮಗಳಿಗೆ ಸಂವಿಧಾನವೆಂದು ಹೆಸರು. ಸಂವಿಧಾನ ರಚನೆಯ ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ಸಂವಿಧಾನದ ಕರಡು ಪ್ರತಿ ತಯಾರಿಸುವ ಗುರುತರ ಕೆಲಸವನ್ನು ಅವರು ಮಾಡಿದರು. 1949ನೆಯ ನವೆಂಬರ್ 26ರಂದು ಸಂವಿಧಾನದ ಕರಡು ಪ್ರತಿ ಅಂಗೀಕಾರಗೊಂಡಿತು.

ಮಹರ್ ಕುಲದ ಡಾ. ಅಂಬೇಡ್ಕರ್ ಅಸ್ಪೃಶ್ಯನೆಂದು ದೂರ ತಳ್ಳಲ್ಪಟ್ಟಿದ್ದರೂ, ತಮ್ಮ ಪ್ರತಿಭೆ, ವಿದ್ಯೆ ಮತ್ತು ಛಲದಿಂದ ಭಾರತದ ಸಂವಿಧಾನ ರಚನೆಯ ಮೂಲಕ 'ಆಧುನಿಕ ಮನು', 'ಸಂವಿಧಾನ ಶಿಲ್ಪಿ' ಎನಿಸಿಕೊಂಡರು. 1956, ಡಿಸೆಂಬರ್ 6 ರಂದು ಅವರು ಇಹಲೋಕವನ್ನು ತ್ಯಜಿಸಿದರು. ಅವರನ್ನು ಎಲ್ಲರೂ ಪ್ರೀತಿ ಗೌರವಗಳಿಂದ 'ಬಾಬಾ ಸಾಹೇಬ್' ಎಂದು ಕರೆಯುತ್ತಿದ್ದರು. ಸಮಾನತೆಗಾಗಿ, ನ್ಯಾಯಕ್ಕಾಗಿ, ಮಾನವೀಯತೆಗಾಗಿ ಹೋರಾಡಿದ ಡಾಕ್ಟರ್ ಭೀಮರಾವ್ ರಾಮ್ ಜಿ ಅಂಬೇಡ್ಕರ್ ಸಮಾಜ ಸುಧಾರಕರಲ್ಲಿ ಅಗ್ರಗಣ್ಯರು.

**- ದೊ.ಶ್ರೀ. ಶೇಷರಾಘವಾಚಾರ್**

### ಲೇಖಕರ ಪರಿಚಯ

ಈ ಪಾಠಭಾಗವನ್ನು ಶ್ರೀ ಎಲ್.ಎಸ್. ಶೇಷಗಿರಿ ರಾವ್ ಪ್ರಧಾನ ಸಂಪಾದಕರಾಗಿರುವ 'ಭಾರತ ಭಾರತಿ ಪುಸ್ತಕ ಸಂಪದ ಮಾಲಿಕೆ'ಯಲ್ಲಿ ಪ್ರಕಟವಾದ ದೊ.ಶ್ರೀ.ಶೇಷರಾಘವಾಚಾರ್ ಬರೆದ 'ಬಿ.ಆರ್ ಅಂಬೇಡ್ಕರ್' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❐ ಉತ್ತರಿಸಿರಿ

- ಭೀಮನ ಹೆಸರಿನ ಅಂಬವಾಡೇಕರ್ ಎಂಬುದನ್ನು ಅಂಬೇಡ್ಕರ್ ಎಂದು ಬದಲಾಯಿಸಿದವರು ಯಾರು? ಯಾಕೆ?
- ಅಂಬೇಡ್ಕರ್ ಅವರಿಗೆ 'ಸಂವಿಧಾನ ಶಿಲ್ಪಿ' ಎಂಬ ಹೆಸರು ಯಾಕೆ ಬಂತು?
- ಅಂಬೇಡ್ಕರ್ ಅವರ ಇಡೀ ಜೀವನ ಯಾವುದಕ್ಕೆ ಮುಡಿಪಾಯಿತು?
- ಕಛೇರಿಯಲ್ಲಿ ಅಂಬೇಡ್ಕರರಿಗೆ ಆದ ಕಹಿ ಅನುಭವ ಯಾವುದು?

### ❐ ಟಿಪ್ಪಣಿ ತಯಾರಿಸಿರಿ

ಈ ಕೆಳಗಿನ ಸಮಾಜ ಸುಧಾರಕರಲ್ಲಿ ನಿಮಗೆ ಇಷ್ಟವಾದ ವ್ಯಕ್ತಿಯ ಜೀವನ ಚರಿತ್ರೆಯನ್ನು ಓದಿ ಟಿಪ್ಪಣಿ ತಯಾರಿಸಿರಿ.

1. ನಾರಾಯಣ ಗುರು
2. ಮಹಾತ್ಮಾ ಗಾಂಧಿ
3. ಅಯ್ಯಂಕಾಳಿ
4. ರಾಜಾರಾಮ್ ಮೋಹನ್ ರಾಯ್

### ❐ ಘೋಷ ವಾಕ್ಯಗಳನ್ನು ತಯಾರಿಸಿರಿ

ಚೌದರ್ ಕೆರೆ ಸತ್ಯಾಗ್ರಹದ ಸನ್ನಿವೇಶವನ್ನು ಓದಿದಿರಲ್ಲವೇ? ಈ ಸತ್ಯಾಗ್ರಹದ ಅಂಗವಾಗಿ ನಡೆದಿರಬಹುದಾದ ಮೆರವಣಿಗೆಯಲ್ಲಿ ಪ್ರದರ್ಶಿಸಲು ಘೋಷಣ ಫಲಕಗಳಲ್ಲಿ ಬರೆಯಬಹುದಾದ ಘೋಷ ವಾಕ್ಯಗಳನ್ನು ಬರೆಯಿರಿ.



## ❐ ಕಿರು ಭಾಷಣವನ್ನು ತಯಾರಿಸಿರಿ

ನಮ್ಮ ದೇಶದಲ್ಲಿ ನೆಲೆನಿಂತಿದ್ದ ಜಾತಿ ಭೇದವನ್ನು ಹಾಗೂ ಅಸ್ಪೃಶ್ಯತೆಯನ್ನು ಇಲ್ಲದಾಗಿಸಲು ಡಾ.ಬಿ.ಆರ್. ಅಂಬೇಡ್ಕರ್‌ರವರು ನಡೆಸಿದ ಹೋರಾಟಗಳ ಮತ್ತು ಚಳುವಳಿಗಳ ಬಗ್ಗೆ ತಿಳಿದುಕೊಂಡಿರಲ್ಲವೇ? ಇದರ ಹಿನ್ನೆಲೆಯಲ್ಲಿ ಶಾಲೆಯಲ್ಲಿ ನಡೆಯಲಿರುವ ಅಯ್ಯಂಕಾಳಿ ದಿನಾಚರಣೆಯ ಅಂಗವಾಗಿ 'ಜಾತಿ ಆಧಾರಿತ ಸಮಾಜ ದೇಶದ ಒಗ್ಗಟ್ಟಿಗೆ ಮಾರಕ' ಎಂಬ ವಿಷಯದಲ್ಲಿ ಭಾಷಣ ಮಾಡಲು ಒಂದು ಕಿರು ಭಾಷಣವನ್ನು ತಯಾರಿಸಿರಿ.

## ❐ ಪಟ್ಟಿ ಮಾಡಿರಿ

ಮೆಟ್ರಿಕ್ಯುಲೇಶನ್, ಇಂಟರ್ ಮಿಡಿಯೇಟ್ ಎಂಬಿವುಗಳು ಈ ಪಾಠದಲ್ಲಿ ಬರುವ ಅನ್ಯದೇಶೀಯ ಪದಗಳಾಗಿವೆ. ದೈನಂದಿನ ಜೀವನದಲ್ಲಿ ಬಳಸುವ ಅನ್ಯ ದೇಶೀಯ ಪದಗಳನ್ನು ಪಟ್ಟಿ ಮಾಡಿರಿ.

## ❐ ಬದಲಾಯಿಸಿ ಬರೆಯಿರಿ

ಈ ಕೆಳಗಿನ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ.

- ಅವರು ಬರೋಡಾದಲ್ಲಿ <u>ಕೆಲಸದಲ್ಲಿದ್ದರು.</u>
- ಅವರು ಬರೋಡಾದಲ್ಲಿ <u>ಕೆಲಸದಲ್ಲಿದ್ದಾರೆ.</u>


  } <u>ಮಾದರಿ ವಾಕ್ಯ</u>
- ಮಮತಳು ಕನಕಪುರ ಶಾಲೆಯಲ್ಲಿ ಕಲಿಯುತ್ತಿದ್ದಳು.
- ಅವಳ ಮಗಳು ಅದೇ ಶಾಲೆಯಲ್ಲಿ ಕಲಿಯು ....................
- ಹಿಂದಿನ ಕಾಲದಲ್ಲಿ ಸ್ಲೇಟಿನಲ್ಲಿ ಕಡ್ಡಿಯಿಂದ ಬರೆಯು ..................
- ಇಂದು ಪೆನ್ನನ್ನು ಉಪಯೋಗಿಸಿ ಬರೆಯು.....................

## ❐ ಕಿರು ಟಿಪ್ಪಣಿ

ಬಿ.ಆರ್. ಅಂಬೇಡ್ಕರ್ ಅವರ ಕಾಲದಲ್ಲಿ ಹಲವಾರು ಮೂಢನಂಬಿಕೆಗಳಿದ್ದುವು ಮತ್ತು ಅವರು ಅವುಗಳ ವಿರುದ್ಧ ಹೋರಾಟ ಮಾಡಿದವರು ಎಂದು ತಿಳಿದಿದ್ದೀರಲ್ಲವೇ.

ಹಾಗಾದರೆ ನಮ್ಮ ಸಮಾಜದಲ್ಲಿ ಈಗ ಕಂಡುಬರುತ್ತಿರುವ ಮೂಢನಂಬಿಕೆಗಳ ಕುರಿತು ಒಂದು ಕಿರುಟಿಪ್ಪಣಿ ಬರೆಯಿರಿ. (ಉದಾಹರಣೆಗೆ, ಕಾಗೆ ಕೂಗುವುದು, ಬೆಕ್ಕು ಅಡ್ಡ ಬರುವುದು, ..... ಇತ್ಯಾದಿ.)

ST-493-7-KANNADA (AT)5-VOL-1



# ಆಸೆ

ಹಕ್ಕಿಯ ಹಾಡಿಗೆ ತಲೆದೂಗುವ ಹೂ
ನಾನಾಗುವ ಆಸೆ;
ಹಸುವಿನ ಕೊರಳಿನ ಗೆಜ್ಜೆಯ ದನಿಯು
ನಾನಾಗುವ ಆಸೆ;
ಹಬ್ಬಿದ ಕಾಮನ ಬಿಲ್ಲಿನ ಮೇಲಿನ
ಮುಗಿಲಾಗುವ ಆಸೆ.
ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ
ಮಿಂಚಾಗುವ ಆಸೆ.
ತೋಟದ ಕಂಪಿನ ಉಸಿರಲಿ ತೇಲುವ
ಜೇನಾಗುವ ಆಸೆ;
ಕಡಲಿನ ನೀಲಿಯ ನೀರಲಿ ಬಳುಕುವ
ಮೀನಾಗುವ ಆಸೆ.
ಸಿಡಿಲನು ಕಾರುವ ಬಿರುಮಳೆಗಂಜದೆ
ಮುನ್ನಡೆಯುವ ಆಸೆ;
ನಾಳೆಯ ಬದುಕಿನ ಇರುಳಿನ ತಿರುವಿಗೆ
ದೀಪವನಿಡುವಾಸೆ.
ಮಣ್ಣಿನ ಕೊಡುಗೆಗೆ, ನೋವಿಗೆ, ನಲಿವಿಗೆ
ಕನ್ನಡಿ ಹಿಡಿವಾಸೆ;
ಮಾನವ ಹೃದಯದ ಕರುಣೆಗೆ, ಒಲವಿಗೆ
ದನಿಗೂಡಿಸುವಾಸೆ

**- ಕೆ.ಎಸ್ ನರಸಿಂಹ ಸ್ವಾಮಿ**

## ಕವಿ ಪರಿಚಯ



ಕೆ.ಎಸ್. ನರಸಿಂಹ ಸ್ವಾಮಿಯವರು 1915ರಲ್ಲಿ ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಜನಿಸಿದರು. ಅವರ ಮೊದಲ ಕವನ ಸಂಕಲನ 'ಕಬ್ಬಿಗರ ಕೂಗು', 'ಮೈಸೂರು ಮಲ್ಲಿಗೆ' ಅವರ ಪ್ರಸಿದ್ಧ ಕೃತಿ. 'ಐರಾವತ', 'ದೀಪದ ಮಲ್ಲಿ', 'ಉಂಗುರ', 'ಇರುವಂತಿಕೆ', 'ಶಿಲಾಲತೆ', 'ತೆರೆದ ಬಾಗಿಲು', 'ನವಪಲ್ಲವ' ಮೊದಲಾದವುಗಳು ಅವರ ಕವನ ಸಂಕಲನಗಳಾಗಿವೆ. ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇರಳದ ಕುಮಾರನಾಶಾನ್ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈ ಪದ್ಯವನ್ನು ಅವರ 'ನವಪಲ್ಲವ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❐ ಹಾಡಿರಿ

ಈ ಪದ್ಯವನ್ನು ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡಿರಿ.

### ❐ ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲುಗಳನ್ನು ಓದಿ, ಸ್ವಾರಸ್ಯ ಬರೆಯಿರಿ..

ತೋಟದ ಕಂಪಿನ ಉಸಿರಲಿ ತೇಲುವ
ಜೇನಾಗುವ ಆಸೆ.
ಕಡಲಿನ ನೀಲಿಯ ನೀರಲಿ ಬಳುಕುವ
ಮೀನಾಗುವ ಆಸೆ.

### ❐ ಆಸ್ವಾದನ ಟಿಪ್ಪಣಿ ಬರೆಯಿರಿ

'ಆಸೆ' ಪದ್ಯದ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

## ❐ ಸಾಲು ಗುರುತಿಸಿರಿ

ಕೆಳಗಿನ ಆಶಯ ಬರುವ ಸಾಲುಗಳನ್ನು ಪದ್ಯದಿಂದ ಗುರುತಿಸಿ ಬರೆಯಿರಿ.

- ಮುಂದಿನ ಬದುಕಿನ ಕಷ್ಟಗಳ ಕತ್ತಲೆಗೆ ಬೆಳಕಾಗುವುದು.
- ಪ್ರಕೃತಿ ನೀಡಿದ ಉಡುಗೊರೆ, ಕಷ್ಟ-ಸುಖಗಳನ್ನು ಗುರುತಿಸುವುದು.
- ಮನುಷ್ಯನ ಹೃದಯದಲ್ಲಿರುವ ಸ್ನೇಹ ಕರುಣೆಗಳನ್ನು ಅಳವಡಿಸಿಕೊಳ್ಳುವುದು.

## ❐ ಭರ್ತಿಗೊಳಿಸಿರಿ

ಆವರಣದಿಂದ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ.

(ಮಿಂಚು, ಜೇನು, ಹೂ, ಮುಗಿಲು)

- ತೋಟದ ಕಂಪಿನ ಉಸಿರಲಿ ತೇಲುವ ......................
- ಹಕ್ಕಿಯ ಹಾಡಿಗೆ ತಲೆದೂಗುವ ..............................
- ಹಬ್ಬಿದ ಕಾಮನಬಿಲ್ಲಿನ ಮೇಲಿನ .............................
- ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ ..............................

## ❐ ಸಾಲುಗಳನ್ನು ಸೇರಿಸಿರಿ

ಮಾಮರ ಎಲೆಗಳ ಮರೆಯಲಿ ಕುಳಿತು
ಉಲಿಯುವ ಕೋಗಿಲೆಯ ನೋಡಿದಿರಾ?
ಮುಗಿಲಿನ ಕನ್ನಡಿ ಬಿಂಬವ ನೋಡಿ
ನಲಿಯುವ ನವಿಲಿನ ನೋಡಿದಿರಾ?
..........................................
.......................................

## ❐ ಸಂಗ್ರಹಿಸಿ ಹಾಡಿರಿ

ಕೆ.ಎಸ್. ನರಸಿಂಹ ಸ್ವಾಮಿಯವರು ಬರೆದ 'ದೀಪವು ನಿನ್ನದೆ ಗಾಳಿಯು ನಿನ್ನದೆ.....' ಎಂಬ ಭಾವಗೀತೆಯನ್ನು ಸಂಗ್ರಹಿಸಿ ಬರೆದು ತರಗತಿಯಲ್ಲಿ ರಾಗವಾಗಿ ಹಾಡಿರಿ.

# ಹಂಚಿ ತಿಂದ ಗೆಳೆಯರು

ಢಣ್ ಢಣ್ ಢಣ್... ಶಾಲೆಯ ಘಂಟೆ ಬಾರಿಸಿತು. 'ಹೋ....' ಎಂದು ಕಿರಿಚಾಡುತ್ತಾ ಮಕ್ಕಳು ತರಗತಿಯಿಂದ ಹೊರಬಿದ್ದರು. ಹತ್ತಿರದಲ್ಲಿ ಮನೆಯಿದ್ದ ಮಕ್ಕಳು ಊಟಕ್ಕೆ ಓಡಿದರು. ಬುತ್ತಿ ತಂದ ಮಕ್ಕಳು ಬಾವಿಕಟ್ಟೆಗೆ ನಡೆದರು. ಗೋಪಿ ತನ್ನ ಬುತ್ತಿ ಎತ್ತಿಕೊಂಡ, ಎಂದಿನಂತೆ 'ಬಾರೋ ಇರ್ಷಾದ್' ಎಂದು ಗೆಳೆಯನನ್ನು ಕೂಗಿದನು.

"ನನಗೆ ಹಸಿವಿಲ್ಲ ಕಣೋ, ನಾನು ಬುತ್ತಿ ತಂದಿಲ್ಲ." ಎಂದು ಇರ್ಷಾದ್ ಉತ್ತರ ಕೊಟ್ಟನು. ನಿನ್ನೆಯೂ "ಹಸಿವಿಲ್ಲ ಬುತ್ತಿ ತಂದಿಲ್ಲ ಎಂದಿದ್ದೆ ನೀನು. ಇಂದೂ ಹಾಗೇ ಹೇಳುತ್ತೀಯಾ. ಯಾಕೋ, ಏನಾಯಿತೋ ನಿನಗೆ? ಬುತ್ತಿ ಯಾಕೆ ತಂದಿಲ್ಲ ಹೇಳು?" ಎಂದು ಗೋಪಿ ಮತ್ತೆ ಕೇಳಿದನು.

"ನನಗೆ ಹಸಿವಿಲ್ಲ ಎಂದೆನಲ್ಲ? ಅದಕ್ಕೇ ಬುತ್ತಿ ತಂದಿಲ್ಲ" ಎಂದು ಇರ್ಷಾದ್ ನುಡಿದನು. ಅವನ ಮುಖ ಬಾಡಿತ್ತು. ದನಿ ನಡುಗುತ್ತಿತ್ತು. ಕಣ್ಣುಗಳಲ್ಲಿ ನೀರು ತುಂಬಿತ್ತು. ಅವನು ಎಂದಿನಂತಿಲ್ಲ ಎನ್ನುವುದು ಗೋಪಿಗೆ ಗೊತ್ತಾಯಿತು.

"ಇರ್ಷಾದ್, ನೀನು ನನ್ನ ದೋಸ್ತಿ ಅಲ್ವೇನೋ. ನನ್ನಲ್ಲೂ ಯಾಕೆ ಗುಟ್ಟು ಮಾಡ್ತೀ, ಹೇಳು" ಎಂದು ಗೋಪಿ ಒತ್ತಾಯಿಸಿದನು.

"ಎರಡು ದಿನಗಳಿಂದ ಅಪ್ಪನಿಗೆ ಕೆಲಸ ಇಲ್ಲ. ಮನೆಯಲ್ಲಿ ಅಕ್ಕಿ ಮುಗಿದಿದೆ. ಗಂಜಿ ಮಾಡಿಲ್ಲ ಮತ್ತೆ ಹೇಗೆ ತರಲಿ? ಏನನ್ನು ತರಲಿ? " ಇರ್ಷಾದ್ ನಿಜ ಸಂಗತಿ ಹೇಳಿದನು.

"ಹಾಗಾದರೆ ಬೆಳಗ್ಗೆ ಏನೂ ತಿಂದಿಲ್ಲವೇ?" ಗೋಪಿ ಕೇಳಿದನು.

"ತಿಂದಿಲ್ಲ." ಇರ್ಷಾದ್ ಉತ್ತರ ಕೊಟ್ಟನು.

ಗೋಪಿಗೆ ಬಹಳ ಕೆಡುಕೆನಿಸಿತು. "ನೀನು ಬುತ್ತಿ ತರದಿದ್ದರೇನು? ನಾನು ತಂದಿದ್ದೇನಲ್ಲ? ಸದ್ಯ ಇರುವುದನ್ನು ಹಂಚಿ ತಿನ್ನೋಣ." ಎಂದು ಅವನು ಇರ್ಷಾದ್‌ನನ್ನು ಕರೆದನು. "ಬೇಡ ನಾನು ಬರುವುದಿಲ್ಲ" ಎಂದ ಇರ್ಷಾದ್.

ಗೋಪಿ ಬಿಡಲಿಲ್ಲ. "ನೀನು ಬರದಿದ್ದರೆ ಚಿಂತಿಲ್ಲ. ನಾನೂ ಬುತ್ತಿ ಉಣ್ಣುವುದಿಲ್ಲ." ಎಂದು ಗೋಪಿಯು ಗಟ್ಟಿಯಾಗಿ ಕೂತು ಬಿಟ್ಟನು. ಹತ್ತು ನಿಮಿಷ ಕಳೆದು ಹೋಯಿತು. "ಸುಮ್ಮನೆ ಹಠ ಹಿಡಿಯಬೇಡ ಗೋಪಿ. ನೀನಂತೂ ಬುತ್ತಿ ತಂದಿದ್ದೀಯಾ ಮತ್ತೆ ನೀನೇಕೆ ಉಪವಾಸ ಮಾಡಬೇಕು?" ಇರ್ಷಾದ್ ಗೋಪಿಯಲ್ಲಿ ಪ್ರಶ್ನಿಸಿದನು.

“ನಾವಿಬ್ಬರೂ ಒಟ್ಟಿಗೇ ಶಾಲೆಗೆ ಬರುವವರು, ಒಂದೇ ತರಗತಿಯಲ್ಲಿ ಕಲಿಯುವವರು. ಇದ್ದುದನ್ನು ಹಂಚಿ ತಿನ್ನೋಣ ಎಂದರೆ ನೀನೇಕೆ ಬೇಡ ಎನ್ನುತ್ತಿ? ನಿನಗೆ ನನ್ನ ಮೇಲೆ ಪ್ರೀತಿ ಇಲ್ಲವೇ?” ಎಂದು ಗೋಪಿ ವಾದ ಮಾಡಿದನು. ಕೊನೆಗೆ ಇರ್ಷಾದ್ ತಾನೇ ಸೋಲಬೇಕಾಯಿತು. ಗೆಳೆಯರಿಬ್ಬರೂ ಬಾವಿಕಟ್ಟೆಗೆ ಬಂದರು. ಕೈಕಾಲು ತೊಳೆದುಕೊಂಡರು. ಗೋಪಿ ಬುತ್ತಿಯ ಮುಚ್ಚಳ ತೆಗೆದನು. ಬುತ್ತಿಯಲ್ಲಿದ್ದ ಎರಡು ಇಡ್ಲಿಗಳಲ್ಲಿ ಒಂದನ್ನು ಅದರಲ್ಲಿಟ್ಟು ಸ್ವಲ್ಪ ಚಟ್ನಿಯನ್ನೂ ಹಾಕಿದನು. ಇಬ್ಬರೂ ಒಂದೊಂದು ಇಡ್ಲಿ ತಿಂದರು. ಕೈ ಬಾಯಿ ತೊಳೆದುಕೊಂಡರು.



“ನನ್ನಿಂದಾಗಿ ನಿನಗೆ ಅರೆಹೊಟ್ಟೆಯಾಯಿತು.” ಇರ್ಷಾದ್ ಪೇಚಾಡಿಕೊಂಡ. “ಹಂಚಿ ಉಂಡರೆ ರುಚಿ ಹೆಚ್ಚಂತೆ. ನನ್ನಮ್ಮ ಹೇಳುತ್ತಾರೆ. ನನಗೆ ನಿಜಕ್ಕೂ ಸಂತೋಷವಾಗಿದೆ, ಹೊಟ್ಟೆ ತುಂಬಿದೆ. ನೀನೇನೂ ಯೋಚಿಸಬೇಡ” ಎಂದು ಗೋಪಿ ಹೇಳಿದನು. ಇಬ್ಬರೂ ತರಗತಿಗೆ ಹಿಂತಿರುಗಿದರು. ಈಗ ಗೋಪಿ ತುಂಬ ಖುಷಿಯಲ್ಲಿದ್ದನು.

ಮರುದಿನ ಗೋಪಿ ಶಾಲೆಗೆ ಹೊರಡುವ ಸಮಯ. ಅವನ ಊಟ ಆಗಲೇ ಮುಗಿದಿತ್ತು. ಅವನು ಅಂಗಿ ಚಡ್ಡಿ ಧರಿಸಿ, ಪುಸ್ತಕಗಳನ್ನು ಚೀಲದಲ್ಲಿ ತುಂಬಿದ್ದ. ಇನ್ನೂ ಬುತ್ತಿ ಸಿದ್ಧವಾಗಬೇಕಲ್ಲ? "ಅಮ್ಮಾ ಬುತ್ತಿಗೆ ಹಾಕಿದೆಯಾ?" ಅವನು ವಿಚಾರಿಸಿದ. "ಹೂಂ... ಹಾಕುತ್ತಿದ್ದೇನೆ" ಅಮ್ಮ ಉತ್ತರ ಕೊಟ್ಟರು. ಗೋಪಿ ಅಡುಗೆ ಮನೆಗೆ ನಡೆದ, "ಅಮ್ಮ ನನ್ನ ಬುತ್ತಿಗೆ ಒಂದು ಇಡ್ಲಿ ಜಾಸ್ತಿ ಹಾಕುತ್ತೀಯಾ?" ಅವನು ಅಮ್ಮನನ್ನು ಕೇಳಿದ. ಅಮ್ಮನಿಗೆ ಬಹಳ ಸಂತೋಷವಾಯಿತು. "ಏನು, ಪುಟ್ಟಾ ನಿನಗೀಗ ಹಸಿವು ಹೆಚ್ಚಾಗಿದೆಯಾ? ಖುಷಿಯಾಯಿತು ಬಿಡು, ನೀನು ತಿನ್ನುವೆಯಾದರೆ ಒಂದಲ್ಲ ಎರಡು ಇಡ್ಲಿ ಹೆಚ್ಚು ಹಾಕುತ್ತೇನೆ" ಎಂದು ಅವರು ಹೇಳಿದರು.

"ಎರಡು ಬೇಡಮ್ಮಾ, ಒಂದು ಇಡ್ಲಿ ಹೆಚ್ಚು ಇರಲಿ, ಅಷ್ಟುಸಾಕು ನನಗೆ" ಎಂದ ಗೋಪಿ. "ಅದರೆ ಒಟ್ಟು ಮೂರು ಇಡ್ಲಿ ತಾನೇ? ಖಂಡಿತ ಹಾಕುತ್ತೇನೆ. ಆದರೆ ಒಂದು, ಅದನ್ನೆಲ್ಲ ನೀನು ತಿನ್ನಬೇಕು. ಅರ್ಧಕ್ಕರ್ಧ ಹಿಂದೆ ತರಬಾರದು ಮತ್ತೆ" ಅಮ್ಮ ಷರತ್ತು ಹಾಕಿದರು.ಈಗ ಗೋಪಿಗೆ ಒಂದು ಸಮಸ್ಯೆ ಎದುರಾಯಿತು. "ಆಗಲಿ ತಿನ್ನುತ್ತೇನೆ." ಎಂದು ಅಮ್ಮನಲ್ಲಿ ಸುಳ್ಳು ಹೇಳಬೇಕೆ? ಹಾಗೆ ಹೇಳಬಹುದೇ?ಅದು ತಪ್ಪಲ್ಲವೇ? ಅವನು ಯೋಚನೆಗೆ ಒಳಗಾದ. "ಏನೋ ಗೋಪಿ, ಯಾಕೆ ಸುಮ್ಮನಿದ್ದೀಯ? ಬುತ್ತಿಗೆ ಹಾಕಿ ಕೊಟ್ಟದ್ದನ್ನೆಲ್ಲ ತಿನ್ನುತ್ತೀಯಷ್ಟೇ?" ಎಂದು ಅವರು ಇನ್ನೊಮ್ಮೆ ಕೇಳಿದರು. "ಅಮ್ಮಾ, ನಾನು ತಿನ್ನುವುದು ಎರಡೇ ಇಡ್ಲಿ...." ಗೋಪಿ ರಾಗ ಎಳೆದ.

"ಅಮ್ಮಾ, ನಮ್ಮ ಇರ್ಷಾದ್ ಇದ್ದಾನಲ್ಲಾ? ಕೆಲವು ದಿನ ಅವನ ಅಪ್ಪನಿಗೆ ಕೆಲಸ ಇರುವುದಿಲ್ಲವಂತೆ. ಆಗ ಅವರಿಗೆ ಉಣ್ಣಲಿಕ್ಕೂ ಕಷ್ಟವಂತೆ. ಎಷ್ಟೋ ಬಾರಿ ಅವನು ಗಂಜಿ ಸಹ ಉಣ್ಣದೆ ಶಾಲೆಗೆ ಬರುತ್ತಾನೆ. ಮತ್ತೆ ಬುತ್ತಿ ಹೇಗೆ ತಂದಾನು? ಅವನು ಬುತ್ತಿ ತರದ ದಿನ ಒತ್ತಾಯ ಮಾಡಿ ನಾನು ನನ್ನ ಬುತ್ತಿಯಲ್ಲಿ ಇರುವುದನ್ನು ಅವನ ಜೊತೆ ಹಂಚಿ ತಿನ್ನುತ್ತೇನೆ " ಗೋಪಿ ಮಾತು ನಿಲ್ಲಿಸಿದ. ಅಮ್ಮ ಏನು ಹೇಳುತ್ತಾಳೋ ಎಂಬ ಹೆದರಿಕೆ ಅವನಿಗೆ. ಕಾತರದಿಂದ ಅಮ್ಮನ ಮುಖವನ್ನೆ ಅವನು ದಿಟ್ಟಿಸುತ್ತಿದ್ದ. ಮಗನ ಮಾತನ್ನು ಅಮ್ಮ ಕಿವಿಗೊಟ್ಟು ಕೇಳಿದರು. ಅವನ ಒಳ್ಳೆಯ ಬುದ್ಧಿಗಾಗಿ ಅವರು ಹೆಮ್ಮೆಪಟ್ಟರು. "ಮಗೂ, ನೀನು ಸತ್ಯವನ್ನೇ ಆಡಿದ್ದೀಯಾ ನಿಜಕ್ಕೂ ನನಗೆ ಸಂತೋಷವಾಗಿದೆ. ನಮಗೆ ಶಕ್ತಿ ಇರುವಷ್ಟು ಕಾಲ ಇಂಥ ಕೆಲಸ ನಡೆಯುತ್ತಿರಲಿ" ಎಂದು ಅವರು ಹೇಳಿದರು. ಅವರು ಮತ್ತೆ ಬುತ್ತಿಗೆ ಇಡ್ಲಿಗಳನ್ನು ತುಂಬಿ, ಮಗನ ಕೈಗಿತ್ತರು. "ಇದರಲ್ಲಿ ನಾಲ್ಕು ಇಡ್ಲಿಗಳಿವೆ.

ನಿನಗೆರಡು ನಿನ್ನ ಗೆಳೆಯನಿಗೆರಡು. ಇರ್ಷಾದ್ ಚೆನ್ನಾಗಿ ಕಲಿಯಲಿ, ಅವನ ಕಷ್ಟದ ದಿನಗಳು ಮುಗಿಯುವವರೆಗೂ ನಮ್ಮಿಂದಾಗುವ ಸಹಾಯ ಮಾಡೋಣ" ಅಮ್ಮ ಭರವಸೆ ನೀಡಿದರು. ಗೋಪಿ ಅಮ್ಮನ ಕೈಗೊಂದು ಮುದ್ದಿನ ಮುದ್ರೆ ಒತ್ತಿದ.

**- ಪಳಕಳ ಸೀತಾರಾಮ ಭಟ್**

## ಲೇಖಕರ ಪರಿಚಯ



ಈ ಕಥೆಯನ್ನು ಪಳಕಳ ಸೀತಾರಾಮ ಭಟ್ಟರ ಮಕ್ಕಳ ಕಥೆಗಳ ಸಮಗ್ರ ಸಂಕಲನದ ಎರಡನೇ ಸಂಪುಟವಾದ 'ಬಾಲ ಕಥಾಲೋಕ' ದಿಂದ ಆಯ್ದುಕೊಳ್ಳಲಾಗಿದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲಸಾಹಿತ್ಯ ಪುರಸ್ಕಾರ' ಲಭಿಸಿದೆ. ಪಳಕಳ ಸೀತಾರಾಮ ಭಟ್ಟರು 1931 ಅಗೋಸ್ತು 14 ರಂದು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಪುತ್ತಿಗೆಯಲ್ಲಿ ಜನಿಸಿದರು. ಶ್ರೀಯುತರು ಸ್ಥಾಪಿಸಿದ 'ಶಿಶುಸಾಹಿತ್ಯ ಮಾಲೆ' ಮೂಲಕ ಹಲವಾರು ಮಕ್ಕಳ ಪುಸ್ತಕಗಳನ್ನು ಹೊರತಂದಿದ್ದಾರೆ. ಎಳೆಯರ ಗೆಳೆಯ, ಕಂದನ ಕೊಳಲು, ಕಿರಿಯರ ಕಿನ್ನರಿ, ಗಾಳಿಪಟ, ತಮ್ಮನ ತಂಬೂರಿ, ತಿಮ್ಮನ ತುತ್ತೂರಿ ಮುಂತಾದ ಕವನ ಸಂಕಲನಗಳನ್ನು, ಗಡಿಬಿಡಿ ಗಂಡ, ಚಿಕ್ಕಣಿ ಚೋಮ ಇತ್ಯಾದಿ ಕಥಾ ಸಂಕಲನಗಳನ್ನು ಹಾಗೂ ಏಕಲವ್ಯ, ಕಿಟ್ಟಾಯಣ ಮುಂತಾದ ನಾಟಕಗಳನ್ನು ರಚಿಸಿದ್ದಾರೆ.

## ಚಟುವಟಿಕೆಗಳು

### ❑ ಸಂದರ್ಭ ಬರೆಯಿರಿ

- "ಮನೆಯಲ್ಲಿ ಅಕ್ಕಿ ಮುಗಿದಿದೆ. ಗಂಜಿ ಮಾಡಿಲ್ಲ, ಮತ್ತೆ ಹೇಗೆ ತರಲಿ? ಏನನ್ನು ತರಲಿ?"
- "ಮಗೂ, ನೀನು ಸತ್ಯವನ್ನೇ ಆಡಿದ್ದೀಯಾ ನಿಜಕ್ಕೂ ನನಗೆ ಸಂತೋಷವಾಗಿದೆ. ನಮಗೆ ಶಕ್ತಿ ಇರುವಷ್ಟು ಕಾಲ ಇಂಥ ಕೆಲಸ ನಡೆಯುತ್ತಿರಲಿ"

ಈ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?

## ❐ ಸಂಭಾಷಣೆಯನ್ನು ಬರೆದು ಅಭಿನಯಿಸಿರಿ

ಈ ಕಥೆಯಲ್ಲಿ ಬರುವ ಯಾವುದಾದರೂ ಒಂದು ಜೊತೆ ಕಥಾಪಾತ್ರಗಳ (ಗೋಪಿ-ಇರ್ಷಾದ್, ಗೋಪಿ-ಅಮ್ಮ) ಸಂಭಾಷಣೆಯನ್ನು ಬರೆದು, ಏಕಪಾತ್ರಾಭಿನಯವಾಗಿ ತರಗತಿಯಲ್ಲಿ ಅಭಿನಯಿಸಿರಿ.

## ❐ ಶೀರ್ಷಿಕೆಯನ್ನು ಬದಲಾಯಿಸಿರಿ

ಈ ಕಥೆಯ ಶೀರ್ಷಿಕೆಯನ್ನು ಬದಲಾಯಿಸಿ ಬೇರೆ ಶೀರ್ಷಿಕೆಗಳನ್ನು ತಯಾರಿಸಿ ಚರ್ಚಿಸಿ ಸೂಕ್ತವಾದುದನ್ನು ಬರೆಯಿರಿ.

## ❐ ಕಥೆಯನ್ನು ಮುಂದುವರಿಸಿ ಬರೆಯಿರಿ

ಗೋಪಿ ಮತ್ತು ಇರ್ಷಾದ್ ಅವರು ಬೆಳೆದು ದೊಡ್ಡವರಾದರು. ಕಾಲೇಜು ಹಂತ ತಲುಪಿದಾಗ ಬೇರೆ ಬೇರೆ ಸಂಸ್ಥೆಗಳಲ್ಲಿ ಕಲಿಯಬೇಕಾಯಿತು. ಅವರಿಗೆ ಪರಸ್ಪರ ಬೇರ್ಪಡುವಾಗ ತುಂಬಾ ಬೇಸರವಾಯಿತು. ವರ್ಷಗಳು ಕಳೆದವು. ಅವರೊಳಗೆ ಸಂಪರ್ಕವೇ ಇಲ್ಲದಾಯಿತು. ಒಂದು ದಿನ ...................................

## ❐ ಕಿರು ಪ್ರಬಂಧ

"ಇದರಲ್ಲಿ ನಾಲ್ಕು ಇಡ್ಲಿಗಳಿವೆ. ನಿನಗೆರಡು, ನಿನ್ನ ಗೆಳೆಯನಿಗೆರಡು. ಇರ್ಷಾದ್ ಚೆನ್ನಾಗಿ ಕಲಿಯಲಿ...... ನಮ್ಮಿಂದಾಗುವ ಸಹಾಯ ಮಾಡೋಣ'' ಎಂದರು ಗೋಪಿಯ ತಾಯಿ.

ಮೇಲಿನ ಮಾತಿನ ಹಿನ್ನೆಲೆಯಲ್ಲಿ ಜಾತಿ ಭೇದ ಮರೆತು ಸಮಾಜದಲ್ಲಿ ಸಹಬಾಳ್ವೆ, ಸಹಜೀವನ, ಪರೋಪಕಾರಗಳ ಅಗತ್ಯದ ಕುರಿತು ಕರೆ ನೀಡುವ ಒಂದು ಕಿರು ಪ್ರಬಂಧ ಬರೆಯಿರಿ.

## ❒ ಲೇಖನ ಚಿಹ್ನೆಗಳನ್ನು ಗುರುತಿಸಿರಿ ಮತ್ತು ಬಳಸಿರಿ

| **ಚಿಹ್ನೆಯ ಹೆಸರು** | **ಚಿಹ್ನೆ** |
|---|---|
| ಅಲ್ಪ ವಿರಾಮ ಚಿಹ್ನೆ | , |
| ಪೂರ್ಣ ವಿರಾಮ ಚಿಹ್ನೆ | . |
| ಪ್ರಶ್ನಾರ್ಥಕ ಚಿಹ್ನೆ | ? |
| ಆಶ್ಚರ್ಯ ಚಿಹ್ನೆ | ! |
| ಅರ್ಧ ವಿರಾಮ ಚಿಹ್ನೆ | ; |
| ಉದ್ಧರಣ ಚಿಹ್ನೆ | “ ” |

## ❒ ಕೆಳಗಿನ ಕಥಾಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.

ಉಲ್ಲಾಸನು ಒಬ್ಬ ಪ್ರತಿಭಾವಂತ ಯುವಕನಾಗಿದ್ದನು ಆದರೆ ಅವನು ಪಡೆದ ಶಿಕ್ಷಣಕ್ಕೆ ಸರಿಯಾಗಿ ಉದ್ಯೋಗ ಸಿಗಲಿಲ್ಲ ಒಂದು ದಿನ ಅವನಿಗೊಂದು ದೂರವಾಣಿ ಕರೆ ಬಂತು ದುಬಾಯಿಗೆ ಬರುತ್ತೀಯಾ ಬರುತ್ತಿಯಾದರೆ ಎಲ್ಲಾ ವ್ಯವಸ್ಥೆ ಮಾಡುತ್ತೇನೆ ಹಲವು ವರ್ಷಗಳ ನಂತರ ಆತನ ಗೆಳೆಯ ವಿಜೇತ ನಿರೀಕ್ಷೆ ಇಲ್ಲದೆಯೇ ಕರೆ ಮಾಡಿದ್ದ ಉಲ್ಲಾಸನಿಗೆ ಆದ ಸಂತೋಷಕ್ಕೆ ಪಾರವೇ ಇಲ್ಲ ಅಬ್ಬಾ ಬಚಾವಾದೆ ಅಂದುಕೊಂಡು ತಂದೆ ತಾಯಿ ಹಾಗೂ ಅಕ್ಕನಿಗೆ ಈ ಸುದ್ದಿಯನ್ನು ಮುಟ್ಟಿಸಿ ಅವರ ಅನುಮತಿಯನ್ನು ಕೇಳಲು ಓಡಿದನು

# ಪದಕೋಶ

ಅ

| | | |
|---|---|---|
| ಅಗ್ರಗಣ್ಯ | – | ಮೊದಲಿಗ |
| ಅಟ್ಟು ಉಣ್ಣಲು | - | ಬೇಯಿಸಿ ತಿನ್ನಲು |
| ಅಡ್ಡಿ | - | ತಡೆ, ವಿರೋಧ |
| ಅದಮ್ಯ | – | ಹೆಚ್ಚು |
| ಅನಿವಾರ್ಯ | – | ನಿವಾರಿಸಲಾಗದ |
| ಅನುಮಾನ | – | ಸಂಶಯ, ಊಹೆ |
| ಅಮೂಲ್ಯ | – | ಬೆಲೆಬಾಳುವ |
| ಅರಿಕೆ | - | ಬೇಡಿಕೆ, ಮನವಿ |
| ಅಸ್ಪೃಶ್ಯ | – | ಸ್ಪರ್ಶಕ್ಕೆ ಯೋಗ್ಯವಲ್ಲದ |
| ಅಂಗೀಕಾರ | – | ಮಾನ್ಯತೆ |
| ಅಂಜಿಕೆ | - | ಹೆದರಿಕೆ |

ಆ

| | | |
|---|---|---|
| ಆಘಾತ | - | ಹೊಡೆತ, ನೋವು |
| ಆಶ್ರಯ | - | ಆಸರೆ, ಸಹಾಯ |

ಇ

| | | |
|---|---|---|
| ಇಂಟರ್ ಮೀಡಿಯೇಟ್ | - | ಹತ್ತನೇ ತರಗತಿಯ ನಂತರದ ಎರಡು ವರ್ಷಗಳ ತರಬೇತಿ |

ಉ

| | | |
|---|---|---|
| ಉದ್ಧಟತನ | – | ಸೊಕ್ಕು |

ಊ

| | | |
|---|---|---|
| ಊರ್ಜಿತ | – | ಅಸ್ಥಿತ್ವದಲ್ಲಿರುವ |

ಎ

| | | |
|---|---|---|
| ಎಲ್ಲೆ | - | ಮೇರೆ, ಗಡಿ |

ಕ

| | | |
|---|---|---|
| ಕಠಿಣ | – | ಕಷ್ಟಕರ |

| | | |
|---|---|---|
| ಕಂದಾಚಾರ | - | ಮೂಢನಂಬಿಕೆ |
| ಕಂಪು | - | ಪರಿಮಳ |
| ಕರಡು | - | ಪರಿಷ್ಕಾರಗೊಳ್ಳದ |
| ಕಹಳೆ | - | ಕೊಂಬುವಾದ್ಯ, ಊದುವ ವಾದ್ಯ |
| ಕಾತರ | – | ಕುತೂಹಲ |
| ಕಾರಭಾರಿ | - | ಸೇವಕ |
| ಕುಂಚಿಗೆ | - | ಕುಲಾವಿ, ಅಂಗಿ |
| ಕೃತಕ | - | ಸಹಜವಲ್ಲದ |
| ಕೆಂಗಿಡಿ | - | ಕೆಂಪು ಕಿಡಿ |
| ಕೆಡುಕು | - | ದೋಷ |
| ಕೊಳೆಗೇರಿ | - | ಮೂಲಭೂತ ಸೌಕರ್ಯಗಳಿಲ್ಲದ ಇಕ್ಕಟ್ಟಾದ ಸ್ಥಳ |
| | | ಚ |
| ಚಚ್ಚು | - | ಜಜ್ಜು, ಹೊಡೆ |
| | | ಛ |
| ಛಲ | – | ಹಠ |
| | | ಜ |
| ಜಾಣ್ಮೆ | - | ಬುದ್ಧಿವಂತಿಕೆ |
| ಜ್ಯಾರಿ | - | ಕಾರ್ಯರೂಪಕ್ಕೆ ಬರುವುದು |
| | | ತ |
| ತಿಮಿರ | – | ಕತ್ತಲೆ |
| ತುಫಾಕಿ | - | ದೊಡ್ಡ ಗಾತ್ರದ ಬಂದೂಕು |
| | | ದ |
| ದನಿ | - | ಧ್ವನಿ, ಶಬ್ದ, ಸ್ವರ |
| ದನಿಗೂಡಿಸು | - | ಜೊತೆಯಲ್ಲಿ ಹೇಳು, ಸಹಮತ ನೀಡು |
| ದಯಾಳು | - | ಕರುಣಾಳು |
| ದಯೆ | - | ಕರುಣೆ |
| ದುಂಡಾದ | - | ಉರುಟಾದ |

| | | |
|---|---|---|
| ದುಡಿತ | – | ಶ್ರಮ |
| ದುಸ್ಸಾಹಸ | – | ಅಸಾಧ್ಯವಾದುದನ್ನು ಮಾಡಲು ಪ್ರಯತ್ನಿಸು, ಕೆಟ್ಟ ಸಾಹಸ |
| | | ನ |
| ನಿರ್ವಹಣೆ | - | ನಿಭಾಯಿಸುವಿಕೆ |
| ನಿಶ್ಚಿಂತೆ | - | ಚಿಂತೆ ಇಲ್ಲದಿರುವುದು. |
| ನೆಮ್ಮದಿ | - | ಸೌಖ್ಯ, ಕ್ಷೇಮ |
| | | ಪ |
| ಪಕ್ವ | - | ಮಾಗಿದ , ಹಣ್ಣಾದ |
| ಪರಾಕ್ರಮಿ | - | ಬಲಶಾಲಿ |
| ಪೌರುಷ | - | ಬಲ |
| ಪ್ರಗತಿ | - | ಸುಧಾರಣೆ |
| | | ಬ |
| ಬಡಗಿ | - | ಮರದ ಕೆಲಸ ಮಾಡುವವನು |
| ಬಹುಪಯೋಗಿ | - | ಬಹಳ ಉಪಯೋಗವಿರುವ |
| ಬಳುಕು | - | ಬಾಗು |
| ಬೆಂಗಾವಲು | - | ಸುರಕ್ಷಾಪಡೆ, ರಕ್ಷಣಾ ಪಡೆ |
| | | ಭ |
| ಭಟರು | - | ಸೈನಿಕರು |
| ಭದ್ರ | – | ಸುರಕ್ಷಿತವಾದ, ಗಟ್ಟಿಮುಟ್ಟಾದ |
| | | ಮ |
| ಮಹತ್ವ | – | ಮುಖ್ಯವಾದ |
| ಮಾಂಡಲೀಕರು | - | ಸಾಮಂತರು, ಮಂಡಲಾಧಿಪತಿಗಳು |
| ಮಿಡಿತ | – | ಸ್ಪಂದನ |
| ಮುಗಿಲು | - | ಮೋಡ, ಮೇಘ |
| ಮುದದಿ | - | ಸಂತೋಷದಿಂದ |
| ಮುದಿ | - | ವಯಸ್ಸಾದ, ಮುಪ್ಪಿನ |

| | | |
|---|---|---|
| ಮುದ್ರೆ | - | ಮೊಹರು |
| ಮೆಟ್ರಿಕ್ಯುಲೇಶನ್ | - | ಹತ್ತನೆಯ ತರಗತಿ |
| ಮೈಲಿಗೆ | - | ಮುಟ್ಟಬಾರದ್ದು |
| | | **ರ** |
| ರಣ | – | ಯುದ್ಧ |
| | | **ಲ** |
| ಲಗಾಮು | - | ಕಡಿವಾಣ |
| | | **ವ** |
| ವೃಥಾ | - | ಸುಮ್ಮನೆ |
| ವೈಣಿಕ | – | ವೀಣೆಯನ್ನು ನುಡಿಸುವವನು. |
| ವ್ಯರ್ಥ | – | ಪ್ರಯೋಜನ ಇಲ್ಲದ್ದು |
| ವ್ಯವಧಾನ | – | ಬಿಡುವು, ವಿರಾಮ |
| ವ್ಯಾಪ್ತಿ | - | ಹರಡುವಿಕೆ, ವ್ಯಾಪಿಸುವಿಕೆ |
| | | **ಶ** |
| ಶೌರ್ಯ | – | ಪರಾಕ್ರಮ |
| | | **ಷ** |
| ಷಡ್ಭುಜ | - | ಆರು ಭುಜ ವಿರುವ ಆಕೃತಿ |
| ಷರತ್ತು | - | ನಿಬಂಧನೆ |
| | | **ಸ** |
| ಸತ್ಕಾರ | – | ಉಪಚಾರ |
| ಸತ್ಯಾಗ್ರಹ | – | ಅಹಿಂಸಾ ರೀತಿಯ ಹೋರಾಟ |
| ಸಾಬೀತುಪಡಿಸು | - | ದೃಢಪಡಿಸು |
| ಸಾಮಾಜಿಕ | – | ಸಮಾಜಕ್ಕೆ ಸಂಬಂಧಿಸಿದ |
| ಸಿಂಹಪಾಲು | - | ಹೆಚ್ಚಿನ ಭಾಗ |
| ಸುಧಾರಕ | – | ಬದಲಾವಣೆಕಾರ |
| ಸ್ರವಿಸು | - | ಜಿನುಗು |
| | | **ಹ** |
| ಹೀನಾಯ | – | ಕೀಳಾದ |
| ಹೈರಾಣ | - | ಸೋಲು |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in